As to how far this is advisable or not, it is not for me to say. I have said that if during the periods of session any conclusion is arrived at, the Government will take the House into confidence and let them know in the first instance, how it has been arrived at.

Motion to elect members to the Committee as Private M mbers Bills and Resolutions.

SRI VEERENDRA PATIL (Minister for Public Works).—I beg to move:

> "That this Assembly do proceed to elect ten Members to the Committee on Private Members Bills and Resolutions in accordance with Sub-Rule (1) of Rule 267-A of the Rules of Procedure and Conduct of Business in the Mysore Legislative Assembly."

MR. SPEAKER.—The question is:

> "That this Assembly do proceed to elect tbe Members to the Committee on Private Members Bills and Resolutions in accordance with Sub-Rule (1) of Rule 267-A of the Rules of Procedure and Conduct of Business in the Mysore Legislative Assembly."

The motion was adopted.

MR. SPEAKER.—The Calendar of events for election to the Committee is as follows:

No. of persons to be elected ;	10
Last dated and hour for receipt of nominations :	Friday, 8th April 1966. 1 p.m.
Last date and hour for withdrawal of nominations	Friday, 8th April 1966. 3 p.m.
Date and hour of election, if necessary	Saturday, 9th April 1966. between 9. 00 a.m. and 11. a m.
Date and hour of counting of votes :	After 11 a.m. and Saturday the 9th April 1966.

Motion *re*: Urging the Government of India to take up the Upper Krishna Project as Centrally Aided Project.

ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಸ್ವಾಮಿ, ಅಧ್ಯಕ್ಷರೇ, ನಾನು ಈ ಕೆಳಗೆಕಾಣಿಸಿದ ಗೊತ್ತುವಳಿಯನ್ನು ಮಂಡಿಸುತ್ತಿದ್ದೇನೆ.

> "This House urges upon the Government to persuade the Government of India to take up the Upper Krishna Project

(ಶ್ರೀ ಎಂ. ಆರ್. ಪಾಟೀಲ್)

estimated to cost Rs. 120 crores which will irrigate nearly 14 lakhs of land in the dry regions of the State as a Centrally-Aided Project outiide the State Plan and to complete it with the utmost expedition.

"thereby raising the present low percentage of irrigated area in the State which is adversely affecting the economy of the people;

"as a big step towards adquately harnessing the unutilised irrigation potention of the State which is blessed with a bounteous watershed;

"and to enable the people to increase, farm production and overcome the present shortage of food.

Mr. SPEAKER.—Motion moved :

"That this House urges upon the Government to persuade the Government of India to take up the Upper Krishna Project estimated to cost Rs. 120 crores which will irrigate nearly 14 laksh of acres of land in the dry regions of the Stata as a Centrally-Aided Project outside the State Plan and to complete expedition.

"thereby raising the present low percentage of irrigated area in the State which is adversely affecting the economy of the people

"as a big step towards adequately harnessing the unutilised irrigation potention of the State which is blessed with a bounteous watershed,

"and to enable the people to increase farm prodution and overcome the present shortage of food."

Sri S. SIVAPPA.—In the agenda, Discussion on Foruth Five Year Plan appears first, and the Motion on Uppor Krishna Project comes next. The Understanding was that we should discuss IV Five Year Plan resolution first. How is that there is a change in the order of business ?

Mr. SPEAKER.—If the Members are not attentive, what can I do ? What has transpired has gone into the records. I also gave reasons why Discussion on Upper Krishna Project was taken first; it will take less time. If, on the other hand, I take the Fourth Five Year Plan first, it will get into endless study. It is the duty of the Members to be present in the House throughout. There is no meaning in telling that I will be in the House as long as I participate in the debate and asking for enlightenment on matters which happend in the Member's absence.

† ಶ್ರೀ ಎಂ. ಆರ್. ಪಾಟೀಲ್.—ಸ್ವಾಮಿ, 1961ನೇ ಇಸವಿಯಲ್ಲಿ ಆದ ಮತಗಣನೆಯ ಪ್ರಕಾರ ನಮ್ಮ ಪ್ರಾಂತ್ಯದ ಜನಸಂಖ್ಯೆ ಎರಡು ಕೋಟಿ 36 ಲಕ್ಷ ಇತ್ತು, ನಮ್ಮ ದೇಶದ ಜನಸಂಖ್ಯೆ

ಪ್ರತಿ ವರ್ಷ ಸೇಕಡ ಎರಡೂಕಾಲು ಪ್ರಮಾಣದಲ್ಲಿ ಏರುತ್ತಿದೆ. ಇವತ್ತಿನವರೆಗೆ ನಮ್ಮ ಮೈಸೂರು ದೇಶದ ಜನಸಂಖ್ಯೆ ಎರಡು ಕೋಟಿ 60 ಲಕ್ಷ ಇದೆ. ಆ ಪ್ರಕಾರ ಈ 2.60 ಲಕ್ಷ ಜನಸಂಖ್ಯೆಗೆ ಸುಮಾರು 48 ಲಕ್ಷ ಟನ್ ಆಹಾರ ಬೇಕು ಎಂದು ಹೇಳುತ್ತೇನೆ. ಆದರೆ ನಮ್ಮ ದೇಶದಲ್ಲಿ ಇವತ್ತಿನ ದಿವಸ ಇರುವಂಥ ಇರಿಗೇಟೆಡ್ ಏರಿಯಾದಲ್ಲಿ ಮತ್ತು ಒಣಭೂಮಿಯಲ್ಲಿ ಸೇರಿ ಸುಮಾರು 45 ಲಕ್ಷ ಟನ್ನು ಮಾತ್ರ ಬೆಳೆಯುತ್ತಾರೆ. ಇವತ್ತಿನ ಪರಿಸ್ಥಿತಿಯಲ್ಲಿ ಮೂರು ಲಕ್ಷ ಟನ್ ಪ್ರಮಾಣದಷ್ಟು ಆಹಾರಧಾನ್ಯ ಕಮ್ಮಿ ಬೆಳೆಯುತ್ತಾರೆಂದು ಆಹಾರ ಶಾಖೆಯವರಿಂದ ತಿಳಿದುಬರುತ್ತದೆ. ಈಗ ಬರಗಾಲವಿರುವುದರಿಂದ 15-16 ಲಕ್ಷ ಟನ್ ಆಹಾರದ ಕೊರತೆ ಬರುತ್ತದೆ ಎಂದು ಹೇಳುವುದು ಸರಿ. ಮೂರು ಲಕ್ಷದಷ್ಟು ಆಹಾರದ ಕೊರತೆ ಇವತ್ತಿನದಿವಸ ನಮ್ಮ ದೇಶದಲ್ಲಿ ಇದೆ. ಈ ಆಹಾರದ ವಿಚಾರದಲ್ಲಿ ನಮ್ಮ ಕಾಲ ಮೇಲೆ ನಾವು ನಿಲ್ಲುವಂತೆ ಮಾಡಬೇಕಾದರೆ ಒಣ ಭೂಮಿಯನ್ನು ಅವಲಂಬಿಸಿದರೆ ಏನೂ ಆಗುವುದಿಲ್ಲ. ಒಣಭೂಮಿಯಮೇಲೆ ಆಧುನಿಕ ಫರ್ಟಿಲೈಜರ್‌ಗಳನ್ನು ಉಪಯೋಗಿಸಿ ಮತ್ತು ಒಳ್ಳೆಯ ಗೊಬ್ಬರವನ್ನು ಉಪಯೋಗಿಸಿ ಎಂದು ಹೇಳಬಹುದು. ಇದು ಹೇಳುವವರಿಗೆ ಚೆನ್ನಾಗಿ ಕಾಣುತ್ತದೆ. ಆದರೆ ಪ್ರತ್ಯಕ್ಷವಾಗಿ ಒಣಭೂಮಿಯಮೇಲೆ ಸಾಗುವಳಿ ಮಾಡುವ ರೈತನಿಗೆ ಬಹಳ ತೊಂದರೆಯಿರುತ್ತದೆ. ಆಧುನಿಕ ಗೊಬ್ಬರ ಮತ್ತು ಫರ್ಟಿಲೈಜರ್ಸ್‌ಗಳನ್ನು ಏನಾದರೂ ಒಣಭೂಮಿಯಮೇಲೆ ಉಪಯೋಗ ಮಾಡಿದರೆ, ಅತಿವೃಷ್ಟಿ ಮತ್ತು ಅನಾವೃಷ್ಟಿಯೇನಾದರು ಆದರೆ ಎಲ್ಲವೂ ಹಾಳಾಗಿ ಹೋಗುತ್ತದೆ ಎಂದು ರೈತರುಗಳು ಯಾವ ಹೊಸ ಯೋಜನೆಗಳನ್ನು, ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಿರುವುದರಿಂದ, ನಮ್ಮ ಆಹಾರದಲ್ಲಿ ನಮ್ಮ ಕಾಲ ಮೇಲೆ ನಾವು ನಿಲ್ಲುವ ಪರಿಸ್ಥಿತಿ ಬರಬೇಕಾದರೆ ನಮ್ಮ ಇರಿಗೇಟೆಡ್ ಏರಿಯಾ ಏನು ಇದೆ, ಅದನ್ನು ಬೆಳೆಸಬೇಕು.

3-30 P. M.

ಕೇಂದ್ರ ಸರಕಾರದವರು ಕೃಷ್ಣಾ ಬೇಸಿನ್‌ಗೆ ಸಂಬಂಧಪಟ್ಟಂತೆ ಅವರು ಒಪ್ಪಿಗೆ ಕೊಟ್ಟದ್ದು 600 ಟಿ. ಎಂ. ಸಿಯಷ್ಟು ನೀರನ್ನುಪಯೋಗಿಸಿಕೊಳ್ಳಬೇಕೆಂದು, ಇದನ್ನು 1976ರ ಒಳಗೇನೇ ಕೃಷ್ಣಾ ಬೇಸಿನ್ ನೊಳಗೆ ಅಭಿವೃದ್ಧಿ ಮಾಡಿದರೆ ಮುಂದೆ ನಮ್ಮ ಕೇಸನ್ನು ಪುನ ವಿಚಾರ ಮಾಡೋಣ ಎಂದು ಹೇಳಿದ್ದಾರೆ. ನಮ್ಮ ಸರಕಾರ ಸದ್ಯಕ್ಕೆ ಹನ್ನೆರಡುವರೆ ಟಿ. ಎಂ. ಸಿ. ಯಷ್ಟು ತೆಗೆದು ಕೊಳ್ಳುತ್ತಿದೆ. 600 ಟಿ. ಯಂ. ಸಿ. ಯಷ್ಟು ತಗೆದುಕೊಳ್ಳುತ್ತ ಇಲ್ಲ. 1976ರ ಒಳಗಾಗಿ ಎಂದರೆ ಇನ್ನೂ ಹತ್ತು ಹನ್ನೊಂದು ವರ್ಷಗಳೊಳಗೆ ನಮ್ಮಲ್ಲಿ ಏನು ಪ್ರಾಜೆಕ್ಟುಗಳು ಬೆಳೆಯುವ ಸಂಖ್ಯೆ ಇದೆ ಎನ್ನುವುದನ್ನು ಲೆಕ್ಕಾಚಾರ ಹಾಕಿದರೆ, 1976ರ ಒಳಗೆ ಇನ್ನೂ 70 ಲಕ್ಷದಷ್ಟು ಜನ ಸಂಖ್ಯೆಯ ಪ್ರಮಾಣ ಹೆಚ್ಚಾಗುತ್ತದೆ. ಇಷ್ಟು ಜನ ಸಂಖ್ಯೆಗೂ ಆಹಾರದ ಪ್ರಮಾಣ ಲೆಕ್ಕ ಹಾಕಿದರೆ ಪ್ರತಿಯೊಬ್ಬ ಮನುಷ್ಯನಿಗೂ ವರ್ಷಕ್ಕೆ 1.6 ಅಥವಾ 1.7 ಕ್ವಿಂಟಾಲ್‌ಗಳಷ್ಟು ಆಹಾರಧಾನ್ಯ ಬೇಕು. 70 ಲಕ್ಷ ಜನರಿಗೂ ಆಹಾರದವಸವನ್ನು ದೊರಕಿಸಿ ಕೊಡಬೇಕಾದರೆ ಇನ್ನೂ 12 ಲಕ್ಷ ಟನ್ನುಗಳಷ್ಟು ಆಹಾರವನ್ನು 1976ರ ಒಳಗೆ ದೊರಕಿಸಿಕೊಡಬೇಕಾಗುತ್ತದೆ. ನಾರ್ಮಲ್ ಕಂಡಿಷನ್‌ನಲ್ಲಿ ನಮಗೆ ಸುಮಾರು ಮೂರು ಲಕ್ಷ ಟನ್ ಹೆಚ್ಚು ಆಹಾರ ಬೇಕು. 1976ರಲ್ಲಿ ಪ್ರಜಾ ಸಂಖ್ಯೆ ಹೆಚ್ಚಾಗುವುದರಿಂದ ಅದರ ಬೆಳವಣಿಗೆಗಳ ಲೆಕ್ಕದಂತೆ ಇನ್ನೂ ಹನ್ನೆರಡು ಲಕ್ಷ ಟನ್ ಆಹಾರ ಬೇಕಾಗುತ್ತದೆ. ಎಂದರೆ 1975ರ ಒಳಗಾಗಿ ಒಟ್ಟು ಇನ್ನೂ 15 ಲಕ್ಷ ಟನ್‌ಗಳಷ್ಟು ಆಹಾರಧಾನ್ಯ ಹೆಚ್ಚು ಬೆಳೆಯಬೇಕಾಗುತ್ತದೆ ಮತ್ತು ಇದನ್ನು ಯೋಚನೆ ಮಾಡಬೇಕಾಗಿ ಬರುತ್ತದೆ. ಡ್ರೈ ಲ್ಯಾಂಡುಗಳೊಳಗೆ ಇಷ್ಟು ಸಂಖ್ಯೆಯಲ್ಲಿ ಬೆಳೆಯುವುದೇ ಇದ್ದರೂ ಸಾಧ್ಯವಾದಷ್ಟು ನಮ್ಮಲ್ಲಿ ಕಾಲುವೆಗಳನ್ನು ತೆಗೆದು ನಾವು ನೀರಾವರಿ ಮೂಲಕ ಮಾಡಬೇಕು. ನಾವು ಇನ್ನೂ 15 ಲಕ್ಷ ಟನ್ನುಗಳಷ್ಟು ಆಹಾರ ದೊರಕಿಸಬೇಕಾದರೆ ಈಗಿನ ಲೆಕ್ಕದ ಪ್ರಕಾರ ಇನ್ನೂ 50 ಲಕ್ಷ ಎಕರೆಗಳಷ್ಟು ಭೂಮಿಯನ್ನು ಇರಿಗೇಟೆಡ್ ಏರಿಯಾದೊಳಗೆ ತರಬೇಕಾಗುತ್ತದೆ. ಏಕೆಂದರೆ, ಈಗಿನ ಸ್ಟ್ಯಾಟಿಸ್ಟಿಕ್ಸ್‌ಗಳು ಏನು ಹೇಳುತ್ತಾರೆಂದರೆ, ಡ್ರೈ ಲ್ಯಾಂಡ್ 1.6 ಪರ್ ಎಕರೆ ಇದ್ದರೆ ಇದನ್ನು ಇರಿಗೇಟು ಮಾಡಿದ ಮೇಲೆ ವೆಟ್ ಲ್ಯಾಂಡ್ 4.6 ಪರ್ ಎಕರ್ ಎಂದು ಬರುತ್ತೆ. ಹೀಗೆ ಪ್ರತಿಯೊಂದು ಡ್ರೈ ಏರಿಯಾ ಎಕರೆಯನ್ನೂ ವೆಟ್ ಏರಿಯಾಗೆ ಕನ್‌ವರ್ಟ್ ಮಾಡಿದರೆ ಸಾಧಾರಣವಾಗಿ ಒಂದು ಎಕರೆಗೆ ಮೂರು ಕ್ವಿಂಟಾಲುಗಳಷ್ಟು ಧಾನ್ಯ ಹೆಚ್ಚಾಗಿ ಬರುತ್ತದೆ. ಈ ಪ್ರಕಾರ 15 ಲಕ್ಷ ಟನ್ನುಗಳಷ್ಟು 1976ರ ಒಳಗೇ ದೊರಕಿಸಿಕೊಡಬೇಕು. ಎಂದರೆ ಇನ್ನೂ 50 ಲಕ್ಷ ಎಕರೆಯಷ್ಟು ಭೂಮಿಯಲ್ಲಿ ಬೇಸಾಯ ಮಾಡಿ ದೊರಕಿಸಬೇಕಾಗಿ ಬರುತ್ತದೆ. ಈಗ ಸುಮಾರು 30 ಲಕ್ಷ ಎಕರೆಯಷ್ಟು ಭೂಮಿಯಲ್ಲಿ ದೊಡ್ಡ ನೀರಾವರಿ ಯೋಜನೆಗಳು, ಸಣ್ಣ ನೀರಾವರಿ ಯೋಜನೆಗಳು ಮತ್ತೆ ಇತರ ಎಲ್ಲ ಮೆಷರುಗಳನ್ನು ತೆಗೆದುಕೊಂಡು ನೀರಾವರಿ ಮಾಡುತ್ತಿದ್ದೇವೆ. ಮುಂದೆ ಇದನ್ನು 50 ಲಕ್ಷ ಎಕರೆಗಳಷ್ಟು ಹೆಚ್ಚು ಮಾಡಿ ನೀರಾವರಿಗೆ ತರಬೇಕು. ಇದರಲ್ಲಿ ರಾಜ್ಯ ಸರಕಾರದ ಷಾರ್ಟೇಜು ಏನಿದೆ ಅದನ್ನು

(ಶ್ರೀ ಎಂ. ಆರ್. ಪಾಟೀಲ್)

ಬೇರೆ ವಿಚಾರ ಮಾಡಬೇಕು. ನಾವು ಈಗ ಮೂರು ಯೋಜನೆಗಳನ್ನು ಮುಗಿಸಿ ನಾಲ್ಕನೇ ಯೋಜನೆಯ ಮೊದಲನೆ ವರ್ಷದಲ್ಲಿ ಕಾಲಿಡುತ್ತಿದ್ದೇವೆ. ಈ ಮೂರು ಯೋಜನೆಗಳಲ್ಲಿ ನಮ್ಮ ಸರ್ಕಾರದವರು ಇರಿಗೇಷನ್ನು ಪ್ರಾಜೆಕ್ಟುಗಳಿಗಾಗಿ ಸುಮಾರು 250 ಕೋಟಿರೂಪಾಯಿಗಳಷ್ಟು ಖರ್ಚು ಮಾಡಬೇಕೆಂದು ಎಸ್ಟಿಮೇಟು ಮಾಡಿದ್ದಾರೆ ಮತ್ತು ಇದಕ್ಕೆ ತಕ್ಕಂತೆ ಪ್ರಾಜೆಕ್ಟುಗಳನ್ನೂ ಕೈಗೊಂಡರು. ಆದರೆ ನಿಜವಾಗಿ ಇಲ್ಲಿಯವರೆಗೆ ಆಗಿರುವ ಪ್ರಾಜೆಕ್ಟುಗಳಿಗಾಗಿ ಸುಮಾರು 100 ಕೋಟಿ ರೂಪಾಯಿಗಳಷ್ಟು ಹಣವನ್ನು ಈ ಮೂರು ಯೋಜನೆಗಳಲ್ಲಿ ವೆಚ್ಚ ಮಾಡಲಾಗಿದೆ. ಇನ್ನೂ ಉಳಿಕೆಯಾಗಿರುವ ಸುಮಾರು 150 ಕೋಟಿಯಷ್ಟು ಹಣದ ಕೆಲಸಗಳು ಆಗತಕ್ಕದ್ದು ಇದೆ. ಮತ್ತೆ ಈಗ ನಾಲ್ಕನೇ ಪ್ಲಾನಿನಲ್ಲಿ 122 ಕೋಟಿ ರೂಪಾಯಿಗಳಷ್ಟು ಪ್ರಾಜೆಕ್ಟುಗಳನ್ನು ಮಾಡಬೇಕೆಂದು ಇದೆ. ಇಷ್ಟು ಪ್ರಾಜೆಕ್ಟುಗಳನ್ನೂ ಮುಂದೆ ಬರುವ ಹತ್ತು ವರ್ಷಗಳಲ್ಲಿ ಮಾಡಲು ಈಗಾಗಲೇ ನಮ್ಮಲ್ಲಿ ಉಳಿದಿರುವ 150 ಕೋಟಿಯಷ್ಟು ವೆಚ್ಚದ ಯೋಜನೆಗಳು ಮತ್ತು ನಾಲ್ಕನೇ ಯೋಜನೆಯ 122 ಕೋಟಿಯ ಯೋಜನೆಗಳು ಎಂದರೆ ಒಟ್ಟು ಇನ್ನೂ 272 ಕೋಟಿಯಷ್ಟು ವೆಚ್ಚ ಮಾಡಿ ಇದಕ್ಕಾಗಿ ತಕ್ಕ ನೀರಾವರಿ ಯೋಜನೆಗಳನ್ನು ಹೆಚ್ಚು ಮಾಡಬೇಕಾದ ಪ್ರಮಾಣವೂ ಇದೆ. ಈಗ ನಾವು ಸುಮಾರು 14 ಲಕ್ಷ ಎಕರೆಗಳಷ್ಟು ಭೂಮಿಯಲ್ಲಿ ನೀರಾವರಿ ಮಾಡುತ್ತಿದ್ದರೆ ಮುಂದೆ ಇದನ್ನು ಇನ್ನೂ 20 ಲಕ್ಷ ಎಕರೆಗಳಷ್ಟು ಹೆಚ್ಚಾಗಿ ಮಾಡಬೇಕಾಗಿ ಬರುತ್ತದೆ. ಇದರಿಂದೇನಾಗುತ್ತದೆ ಎಂದರೆ, ಇವೊತ್ತಿನ ದಿವಸ ಕೃಷ್ಣಾ ಬೇಸಿನ್, ಕಾವೇರಿ ಬೇಸಿನ್ ಮತ್ತು ಇದರಲ್ಲಿರತಕ್ಕ ಎಲ್ಲ ನೀರನ್ನೂ ಟ್ಯಾಪ್ ಮಾಡಿದರೂ ಸಹ ಸುಮಾರು 65 ಲಕ್ಷ ಎಕರೆಗಳಿಗೂ ಇರುವ ನೀರು ಸಾಕಾಗಲಾರದು ಮತ್ತು ಕೇಂದ್ರ ಸರಕಾರದವರು 600 ಟಿ. ಎಂ. ಸಿ. ಗಳಷ್ಟು ನೀರು ಮಾತ್ರ ಕೊಟ್ಟಿದ್ದಾರೆ. ಇದರ ಪ್ರಕಾರ 65 ಲಕ್ಷ ಎಕರೆಗಳಷ್ಟು ಭೂಮಿಯನ್ನೂ ನೀರಾವರಿ ಮಾಡುವುದಕ್ಕೆ ಸಾಧ್ಯವಿಲ್ಲ. 1976ರ ಒಳಗೇ 50 ಲಕ್ಷ ಎಕರೆಗಳಷ್ಟು ಭೂಮಿಯನ್ನು ನೀರಾವರಿಗೆ ಒಳಪಡಿಸಬೇಕೆಂದರೂ ಅದಕ್ಕೆ ನೀರು ಇಲ್ಲ. ಸುಮಾರು 35 ಲಕ್ಷ ಎಕರೆಗಳಿಗಿಂತಲೂ ಹೆಚ್ಚು ನೀರಾವರಿ ಮಾಡಲು ಬರುವುದಿಲ್ಲ. ಎಂದರೆ ಐದನೆ ಯೋಜನೆ ವೇಳೆಗೆ ಸುಮಾರು ನಾಲ್ಕೂವರೆ ಲಕ್ಷ ಟನ್ನುಗಳಷ್ಟು ಆಹಾರಧಾನ್ಯ ಕಡಿಮೆ ಬೀಳುತ್ತದೆ. ಇದು ಬಹು ಮುಖ್ಯವಾದ ಪ್ರಶ್ನೆ. ನಾನಾಗಲೇ ಹೇಳಿದಂತೆ ಮೂರನೇ ಯೋಜನೆಯಲ್ಲಿ ಉಳಿದಿರುವ 150 ಕೋಟಿಯ ಯೋಜನೆಗಳು ನಾಲ್ಕನೆ ಯೋಜನೆಯಲ್ಲಿ 122 ಕೋಟಿಯ ಯೋಜನೆಗಳು, ಇವೆಲ್ಲವೂ ಸೇರಿ 272 ಕೋಟಿಯಷ್ಟು ಯೋಜನೆಗಳನ್ನು ಇನ್ನು ಮುಂದಿನ ಹತ್ತು ವರ್ಷಗಳಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ನಾಲ್ಕನೇ ಯೋಜನೆಯಲ್ಲಿ ಇವರ ಎಸ್ಟಿಮೇಟು ಪ್ರಕಾರ 80 ಕೋಟಿಯಷ್ಟು ಯೋಜನೆಯ ಕೆಲಸಗಳನ್ನು ಮಾಡಲು ಸ್ಕೀಂ ಹಾಕಿರಬಹುದು. ಮುಂದೆ ಇನ್ನೊಂದು ವರ್ಷಕ್ಕಾಗಿ 80 ಕೋಟಿಯಷ್ಟು ಎಂದೂ ಇಟ್ಟುಕೊಳ್ಳೋಣ. ಎಂದರೆ ಹಿಂದೆ ಒಂದು ವರ್ಷಕ್ಕೆ 16 ಕೋಟಿಯಷ್ಟು ಎಂದು ಹಾಕಿದರೂ ಸಹ ಸುಮಾರು 125 ಕೋಟಿಯಷ್ಟು ಯೋಜನೆಯ ಕೆಲಸಗಳು 1976ರ ಒಳಗೆ ಉಳಿಯುತ್ತದೆ. ಇಷ್ಟು ಯೋಜನೆಗಳು 1976 ರ ಒಳಗೆ ಎಂದರೆ ಇನ್ನು ಒಂಬತ್ತು ಹತ್ತು ವರ್ಷಗಳಲ್ಲಿ ಆಗದೇ ಇರುವುದರಿಂದ ಆಹಾರಧಾನ್ಯದ ಉತ್ಪತ್ತಿಯೂ ಕೂಡ ಕಡಿಮೆ ಬರುತ್ತದೆ. ಹೀಗಿದ್ದು ನಮಗೆ ಕೊಟ್ಟಿರುವ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡರೂ ಎಲ್ಲ ಕಡೆಗಳಿಗೂ ಇದು ಸಾಕಾಗುವುದಿಲ್ಲ ಎನ್ನುವುದನ್ನು ನಾನು ಇಲ್ಲಿ ಕಟ್ಟುನಿಟ್ಟಾಗಿ ಸರಕಾರದಲ್ಲಿ ಹೇಳುತ್ತೇನೆ. ನಾಲ್ಕನೆ ಯೋಜನೆಯಲ್ಲಿ ಆಹಾರ ಧಾನ್ಯ ಹೆಚ್ಚು ಮಾಡಲು ಸುಮಾರು 80 ಕೋಟಿಯಷ್ಟು ಹಣ ತೆಗೆದಿಡಲಾಗಿದೆ. ಹಾಗಿದ್ದರೂ ಕೂಡ ಸರಕಾರ ಒಂದು ವರ್ಷಕ್ಕೆ ಸುಮಾರು 15 ಅಥವಾ 16 ಕೋಟಿಯಷ್ಟು ಕೂಡ ಮಾಡಬಲ್ಲೆವು ಎಂದರೆ ಇನ್ನು ಹತ್ತು ವರ್ಷಕ್ಕೆ ಸುಮಾರು 150 ರಿಂದ 160 ಕೋಟಿಯಷ್ಟು, ಖರ್ಚು ಮಾಡಬೇಕಾಗಿಬರುತ್ತದೆ. ಆದರೆ 130 ಕೋಟಿಯಷ್ಟು ಕೂಡ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಇಷ್ಟು ಹಣ ಎಲ್ಲಿಂದ ತರುವುದಕ್ಕೆ ಆಗುತ್ತದೆ? ತಾತ್ಕಾಲಿಕವಾಗಿ ಹಣ ಒದಗಿಸಿದ್ದರೂ ಇದರ ಪರಿಣಾಮದಿಂದ ಸುಮಾರು 9 ಅಥವಾ ಹತ್ತು ಲಕ್ಷ ಟನ್ನುಗಳಷ್ಟು ಆಹಾರ ದವಸ ಕಡಿಮೆ ಬರುತ್ತದೆ ಮತ್ತು ಅಭಾವವೂ ಆಗುತ್ತದೆ. ಅಪ್ಪರ್ ಕೃಷ್ಣಾ ಯೋಜನೆ ಒಂದಕ್ಕೆ ಸುಮಾರು 120 ಕೋಟಿಯಷ್ಟು ಹಣ ಬೇಕಾಗುತ್ತದೆ ಉಳಿದ ಯೋಜನೆಗಳಿಗಾಗಿ ಎಂದರೆ, ಕಾವೇರಿ ಬೇಸಿನ್‌ನಲ್ಲಿ ಕೃಷ್ಣಾ ಬೇಸಿನ್‌ನಲ್ಲಿ ಇರುವ ಯೋಜನೆಗಳನ್ನೆಲ್ಲಾ ತೆಗೆದುಕೊಂಡರೆ ಒಂದು ವರ್ಷಕ್ಕೆ ಸುಮಾರು 15 ಕೋಟಿಯಷ್ಟು ವೆಚ್ಚದಲ್ಲಿ ಮುಗಿಸಬೇಕಾಗುತ್ತದೆ. ಆದರೆ ಅಪ್ಪರ್ ಕೃಷ್ಣಾ ಯೋಜನೆಗಾಗಿಯೇ ಸುಮಾರು 120 ಕೋಟಿಯಷ್ಟು ಹಣ ಬೇಕಾಗುತ್ತದೆ. ಇದನ್ನು ನಾವೇ ತೆಗೆದುಕೊಂಡು ಮುಗಿಸುವುದಕ್ಕೆ ಸಾಧ್ಯವಾಗಲಾರದು. ಇದಕ್ಕೆ ಕೇಂದ್ರ ಸರಕಾರದವರು ಮುಂದೆ ಬರಲೇಬೇಕಾಗುತ್ತದೆ. ಮುಂದೆ ಬಾರದಿದ್ದರೆ ನಮ್ಮ ರಾಜ್ಯಕ್ಕೆ

ತೊಂದರೆ ಯಾಗುತ್ತದೆ. ಇದರಿಂದ ಇನ್ನಷ್ಟು ಆಹಾರದ ಅಭಾವವಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಅಪ್ಪರ್ ಕೃಷ್ಣಾ ಯೋಜನೇ ಈಗ ಆಗದೇ ಇರುವುದರಿಂದ ಇಲ್ಲಿ ಮೊದಲಿನಿಂದಲೂ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳೇ ಇವೆ. ಇವು ಎಂದರೆ ಬಿಜಾಪುರ, ಗುಲ್ಬರ್ಗಾ, ರಾಯಚೂರು, ಧಾರವಾಡದ ಕೆಲವು ಭಾಗಗಳು, ಚಿತ್ರದುರ್ಗದ ಕೆಲವು ಭಾಗಗಳು, ಮತ್ತು ತುಮಕೂರಿನ ಕೆಲವು ಭಾಗಗಳು ಮೇಲಿಂದ ಮೇಲೆ ವರ್ಷೆ ವರ್ಷೇ ಇಲ್ಲವೇ ಎರಡು ವರ್ಷ ಕ್ಕೊಮ್ಮೆ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳಾಗಿವೆ. ಹೀಗಿರುವವಾಗ ನಾನು ಏನು ಹೇಳುತ್ತೇನೆ ಎಂದರೆ, ಕೇಂದ್ರ ಸರಕಾರದವರು ನಮ್ಮ ಸಹಾಯಕ್ಕೆ ಸುಮಾರು 120—130 ಕೋಟಿಯಷ್ಟು ಆಗುವ ಈ ಯೋಚನೆಗಾಗಿ ಸಹಾಯ ಕೊಡದೇ ಇದ್ದರೆ ನಮ್ಮ ಪ್ರಾಂತದಲ್ಲಿ ಸುಮಾರು ಹತ್ತು ಲಕ್ಷದಷ್ಟು ಆಹಾರ ಕೊರತೆ ಬರುತ್ತದೆ. ಇನೊಂದು ವೈಶಿಷ್ಟ್ಯ ನಮ್ಮ ಪ್ರಾಂತ ದಲ್ಲಿರುವುದು ಏನೆಂದರೆ, ಉಳಿದ ಪ್ರಾಂತಗಳಲ್ಲಿ ಸಾಮಾನ್ಯವಾಗಿ ಒಂದು ಎಕರೆಯಷ್ಟು ನೀರಾವರಿ ಮಾಡುವುದಕ್ಕೆ ಎಷ್ಟು ಹಣ ಬೇಕೋ ಆದರ ಎರಡರಷ್ಟು ಹಣವನ್ನು ಪ್ರಾಂತದಲ್ಲಿ ಒಂದು ಎಕರೆ ಯಷ್ಟು ಭೂಮಿಯನ್ನು ನೀರಾವರಿಗೆ ತರಬೇಕಾದರೆ ಬೇಕಾಗುತ್ತದೆ. ನಮ್ಮಲ್ಲಿ ಕಾಲುವೆಗಳು ಹಾಗೂ ಕಟ್ಟೆಗಳು ಇರುವ ಪ್ರದೇಶಗಳು ಹೆಚ್ಚಾಗಿಲ್ಲ. ಅಲ್ಲದೆ ನೀರಾವರಿ ಯೋಜನೆಗಳಲ್ಲಿಯೂ ಕೂಡ ಆಲ್ ಇಂಡಿಯಾ ಆವರೇಜಿನಂತೆ ನೋಡಿದರೆ ನಮ್ಮಲ್ಲಿ ಶೇಕಡಾ ಎರಡರಷ್ಟು ಕಮ್ಮಿ ಬೀಳುತ್ತದೆ ಇದಕ್ಕೋಸ್ಕರ ನಮ್ಮ ಸರಕಾರದವರು ಕೇಂದ್ರ ಸರಕಾರದವರ ಮೇಲೆ ಆದಷ್ಟೂ ಒತ್ತಾಯ ಮಾಡಿ ಸಹಾಯ ಮಾಡಬೇಕೆಂದು ಹೇಳುವ ಪ್ರಸಂಗ ಬಂದಿದೆ. ಅಲ್ಲದೆ ನಮ್ಮ ಪ್ರಾಂತದಲ್ಲಿರುವ ಯೋಜನೆಗಳಿಗಾಗಿ ಎಷ್ಟು ಹಣ ಬೇಕು ಮತ್ತು ಹಣವನ್ನು ದೊರಕಿಸಿ ಕೊಂಡಿದ್ದೇವೆ ಮತ್ತು ಮತ್ತು ಇದಕ್ಕಾಗಿ ಯಾವ ಯಾವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಎನ್ನುವುದನ್ನು ನೋಡುವುದಕ್ಕೆ ಮೊದಲಾಗಿ ಉಳಿದ ಪ್ರಾಂತಗಳು ಎಷ್ಟು ನೀರಾವರಿ ಯೋಜನೆಗಳಿಗಾಗಿ ಸಹಾಯವನ್ನು ಪಡದಿವೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇವೆ.

ಇವೊತ್ತಿನ ದಿವಸ ಪೇಪರಿನಲ್ಲಿ ರಿಪೋರ್ಟು ಬಂದಿದೆ. ಪ್ಲಾನಿಂಗ್ ಕಮೀಷನ್ ಅಧ್ಯಕ್ಷರಾದ ಶ್ರೀ ಅಶೋಕಾ ಮೆಹತಾರವರನ್ನು ನೀವು ಭಕ್ರಾ ನಂಗಲ್ ಯೋಜನೆಗೆ ಕೇಂದ್ರ ಸರ್ಕಾರ ಸಹಾಯ ಮಾಡಿದಿರಿ ಎಂದು ಕೇಳಿದ್ದಕ್ಕೆ ಅವರು ಅದೊಂದು ಪ್ರಶ್ನೆ ಬೇರೆ ಇತ್ತು, ವಿಶಿಷ್ಟ ಪ್ರಶ್ನೆಯೂ ಇತ್ತು, ಪಾಕೀಸ್ಥಾನಕ್ಕೆ ಸಂಬಂಧಪಟ್ಟ ಪ್ರಶ್ನೆಯೂ ಇತ್ತು, ಆದುದರಿಂದ ಅದನ್ನು ತೆಗೆದುಕೊಂಡೆವು, ಆದರೆ ಅದನ್ನು ಬೇರೆ ಕಡೆ ಅನ್ವಯಿಸಲಿಕ್ಕೆ ಬರುವುದಿಲ್ಲ ಎಂದು ಹೇಳಿದರು. ಆದರೆ ಸರ್ಕಾರದವರು ಭಗೀರಥ ಪುಸ್ತಕದಲ್ಲಿ ಅಚ್ಚು ಹಾಕಿಸಿ ಕಳುಹಿಸಿರುವುದನ್ನು ನೋಡಿದರೆ ಸರ್ಕಾರದ ಅಂಕಿ ಸಂಖ್ಯೆಗಳೇ ಹೇಳುತ್ತವೆ; ಪಂಜಾಬ್ ಮತ್ತು ರಾಜಾಸ್ಥಾನಗಳ ಕಡೆ ಕೇಂದ್ರ ಸರ್ಕಾರ 194 ಕೋಟಿ 74 ಸಾವಿರ ಧನ ಸಹಾಯ ಮಾಡಿದ್ದಾರೆ. ಚಂಬಲ್ ಪ್ರಾಜೆಕ್ಟಿಗೋಸ್ಕರ ಮಧ್ಯ ಪ್ರದೇಶ ಮತ್ತು ರಾಜಾಸ್ಥಾನ ಎರಡು ದೇಶಗಳಿಗೆ 40 ಕೋಟಿ 61 ಲಕ್ಷ ರೂಪಾಯಿ ಹಣವನ್ನು ಕೇಂದ್ರ ಸರ್ಕಾರದ ವರು ಸಹಾಯ ಮಾಡಿದ್ದಾರೆ. ಅಷ್ಟೇ ಅಲ್ಲದೆ ರಾಜಾಸ್ಥಾನದ ಚಂಬಲ್ ಪ್ರಾಜೆಕ್ಟ್ ಸಲುವಾಗಿ 62 ಕೋಟಿ ಕೇಂದ್ರ ಸರ್ಕಾರದವರು ರಾಜಾಸ್ಥಾನ ಸರ್ಕಾರಕ್ಕೆ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ನಾಗಾರ್ಜುನ ಸಾಗರ ಪ್ರಾಜೆಕ್ಟು ಇದರ ಸಲುವಾಗಿ ಆಂಧ್ರ ಸರ್ಕಾರಕ್ಕೆ 68 ಕೋಟಿ 21 ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಇದು ಅಧಿಕೃತವಾದ ಪುಸ್ತಕದಲ್ಲಿ ದೊರೆತಂಥ ಅಂಕಿ ಸಂಖ್ಯೆಗಳು ನಮ್ಮ ಸಕಾರದವರು ನಮಗೆ ಧನ ಸಹಾಯ ಕೊಡಿ, ನಮ್ಮ ರಾಜ್ಯ ಅಭಾವ ಪರಿಸ್ಥಿತಿಯಲ್ಲಿದೆ, ನಮ್ಮ ಇರ್ರಿಗೇಷನ್ ಪರ್ಸೆಂಟೇಜ್ 8½ ಇದೆ; ಆಲ್ ಇಂಡಿಯಾ 24 ಪರ್ಸೆಂಟು ಇರುವುದರಿಂದ ನಮ್ಮ ರಾಜ್ಯ ಹಿಂದಿದೆ; ಪವರ್ ಪ್ರಾಜೆಕ್ಟ್ಸಿಗೆ ಬಹಳ ಹಣವನ್ನು ಕೊಟ್ಟಿದ್ದೇವೆ, ಆದುದರಿಂದ ಹಣ ಸಹಾಯ ಕೊಡಿರಿ ಎಂದು ಎಷ್ಟು ಒತ್ತಾಯ ಮಾಡಿದರೂ ಮೇಲಿಂದ ಮೇಲೆ ಹೇಳುತ್ತಾರೆ, ನಿಮಗೆ ಸಹಾಯ ಏತಕ್ಕೆ ಕೊಡಬೇಕು ? ನಿಮ್ಮ ಕಾಲಿನ ಮೇಲೆ ನಿಲ್ಲಿರಿ, ರಾಜ್ಯ ಸರ್ಕಾರದವರು ಪ್ರಯತ್ನ ಮಾಡುತ್ತಾ ಇಲ್ಲ ಎಂದು. ಆದರೆ ಮೇಲಿಂದ ಮೇಲೆ ಬಂದಂಥ ಬಿಲ್ಲನ್ನು ನಾವು ನೋಡಿದರೆ ಹೋದ ವರ್ಷದಿಂದಲೂ ತೆರಿಗೆಗಳು ಒಂದರ ಮೇಲೊಂದು ಬರುತ್ತಾ ಇವೆ. ಹೋದ ವರ್ಷ ಲ್ಯಾಂಡ್ ರೆವಿನ್ಯೂ ಸರ್‌ಛಾರ್ಜು ಬೆಟರ್‌ಮೆಂಟ್ ಲೆವಿ, ಅರ್ಬನ್ ಲ್ಯಾಂಡ್‌ಟ್ಯಾಕ್ಸ್ ಬಂತು. ಸೇಲ್ಸ್ ಟ್ಯಾಕ್ಸ್ ಎರಡು ಪರ್ಸೆಂಟು ಇದ್ದುದು ಮೂರು ಪರ್ಸೆಂಟು ಆಯಿತು. ಈ ಪ್ರಕಾರ ಸರ್ಕಾರದವರು ಮೇಲಿಂದ ಮೇಲೆ ಧನವನ್ನು ದೊರಕಿಸಿಕೊಳ್ಳುದಕ್ಕೆ ವಿಶ್ವ ಪ್ರಯತ್ನ ಮಾಡಿದರು. ಕೇಂದ್ರ ಸರ್ಕಾರದವರು ಬೇರೆ ಪ್ರಾಂತ್ಯಗಳಿಗೆ ಕೋಟ್ಯಾನು ಕೋಟಿ ರೂಪಾಯಿ ಗಳನ್ನು ನೀರಾವರಿ ಯೋಜನೆಗೆ ಕೊಟ್ಟಿದ್ದಾರೆ. ನಮ್ಮ ದೇಶಕ್ಕೆ ಕೊಡಲು ಏತಕ್ಕೆ ಹಿಂದು ಮುಂದು ನೋಡುತ್ತಾರೋ ಗೊತ್ತಿಲ್ಲ. ನಮ್ಮ ಸರ್ಕಾರ ಸಾಕಷ್ಟು ಒತ್ತಾಯ ಪಡಿಸಿಲ್ಲ ಎನ್ನುವ ಸಂಶಯ ನಮ್ಮ ಜನತೆಯಲ್ಲಿ ಇದೆ. ಆದ್ದರಿಂದ ನಾನು ನಮ್ಮ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಕೇಂದ್ರಸರ್ಕಾರಕ್ಕೆ ಅಂಕಿ ಸಂಖ್ಯೆಗಳನ್ನು ಪೂರೈಸಿ ನಮ್ಮ ಅಪ್ಪರ್ ಕೃಷ್ಣಾ ಯೋಜನೆ ಸಲುವಾಗಿ 120

(ಶ್ರೀ ಎಂ. ಆರ್. ಪಾಟೀಲ್)

ಕೋಟಿ ರೂಪಾಯಿಗಳನ್ನಾದರೂ ಕೊಡಲೇಬೇಕು. ಆಗ ನಮ್ಮ ಕಾಲಿನ ಮೇಲೆ ನಿಲ್ಲಲಿಕ್ಕೆ ಸಾಧ್ಯ ಇದೆ; ಇಲ್ಲದಿದ್ದರೆ 10 ವರ್ಷದೊಳಗೆ ತೀವ್ರ ಆಹಾರ ಅಭಾವ ಬರುತ್ತದೆ ಎನ್ನುವ ಮಾತನ್ನು ಅವರ ನಜರಿಗೆ ತರಬೇಕು. ಅಷ್ಟೇ ಅಲ್ಲ, ಉಳಿದ ಯೋಜನೆಗಳಿಗೂ ಸಹಾಯ ನಮ್ಮ ಸರ್ಕಾರಕ್ಕೆ ಸಾಕಷ್ಟು ದೊರೆಯುತ್ತಿಲ್ಲ ಎಂದು ಕಾಣಬರುತ್ತದೆ. ರೂರಲ್ ಎಲೆಕ್ಟ್ರಿಫಿಕೇಷನ್ ಸ್ಕೀಮಿಗೆ ಹೋದ ವರ್ಷ 1963-64 ನೆಯ ಸಾಲಿನಲ್ಲಿ ಮದ್ರಾಸ್ ರಾಜ್ಯಕ್ಕೆ ಎಂಟು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮೈಸೂರು ಪ್ರಾಂತ್ಯಕ್ಕೆ ಕೇವಲ 60 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಫ್ಲಡ್ ಕಂಟ್ರೋಲ್ ಸ್ಕೀಮಿನ ಸಲುವಾಗಿ ನಾಗಾರ್ಜುನ ಸಾಗರಕ್ಕೆ 26 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮಗೆ ಒಂದು ಕಾಸಿನ ಸಹಾಯವನ್ನೂ ಕೊಟ್ಟಿಲ್ಲ. ನಮ್ಮಲ್ಲಿರುವ ವರದಾ ನದಿಯ ಫ್ಲಡ್‌ನಿಂದಾಗಿ ಅನೇಕ ಹಳ್ಳಿಗಳಿಗೆ ಹಾನಿಯಾಗಿ ಲುಕ್ಸಾನು ಆಗಿದೆ. ನಮ್ಮ ಸರ್ಕಾರದವರು ಏತಕ್ಕೆ ಕೇಂದ್ರ ಸರ್ಕಾರದಿಂದ ಸಹಾಯ ಪಡೆದು ಜನರಿಗೆ ಯೋಗ್ಯ ರಕ್ಷಣೆ ಕೊಟ್ಟಿಲ್ಲ ಎಂದು ಕೇಳುತ್ತೇನೆ. ಮುಂದೆಯಾದರೂ ಯೋಗ್ಯ ರಕ್ಷಣೆ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಸ್ವಾಮಿ, ನಾವು ಈ ಯೋಜನೆ ಸಲುವಾಗಿ ಒತ್ತಾಯವನ್ನು ಕೇಂದ್ರ ಸರ್ಕಾರದ ಮೇಲೆ ತಾರದೆ ಇದ್ದರೆ ಏನು ಪರಿಣಾಮ ಏನು ಆಗುತ್ತದೆ ಎಂದರೆ, ನಮ್ಮ ರೀಸೋರ್ಸಸ್‌ನಿಂದ ಎಲ್ಲಾ ಯೋಜನೆಗಳನ್ನೂ 1976ನೇ ಇಸವಿಯೊಳಗೆ ಮುಗಿಸುವುದಕ್ಕೆ ಸಾಧ್ಯ ಇಲ್ಲ. ಕೇಂದ್ರ ಸರ್ಕಾರದವರು ಈ ಯೋಜನೆಯನ್ನು ತಾವಾಗಿಯೇ ತೆಗೆದುಕೊಂಡರೆ ಹರಕತ್ ಇಲ್ಲ. ಇದಕ್ಕೆ ಎಷ್ಟು ಹಣ ಬೇಕೋ, ಅದನ್ನು ನಮ್ಮ ಕಡೆಯಿಂದ ಒದಗಿಸುವುದಕ್ಕೆ ಸಾಧ್ಯ ಇಲ್ಲ. ಪ್ರಾಜೆಕ್ಟುಗಳಿಗೆ ಬೇಕಾದ ಹಣವನ್ನು ಒದಗಿಸಲು ಹೆಚ್ಚಿಗೆ ಕರಭಾರ ಹಾಕಿ ಉತ್ಪತ್ತಿ ಮಾಡಿಕೊಳ್ಳಲು ಶಕ್ಯ ಇಲ್ಲ. ಆಂಧ್ರ, ಮಹಾರಾಷ್ಟ್ರ ನೋಡಿದರೆ ಅವರು ಯಾವುದೇ ಸೋಷಿಯಲ್ ವೆಲ್‌ಫೇರ್ ಯೋಜನೆ ಇರಲಿ, ಪವರ್ ಪ್ರಾಜೆಕ್ಟ್ ಇರಲಿ ಅವುಗಳಿಗೆ ಕೊಡತಕ್ಕ ಹಣವನ್ನು ಪ್ರತಿಯೊಂದು ಬಾಬಿಗೂ ಕೊಡವೆ, ಅದನ್ನು ಉಳಿಸಿ ನೀರಾವರಿಗೆ ಹಣ ಖರ್ಚು ಮಾಡಿದ್ದರೆ 1976ನೇ ಇಸವಿಯೊಳಗೆ ಆಂಧ್ರ ಪ್ರದೇಶದವರೂ ಮಹಾರಾಷ್ಟ್ರ ಪ್ರದೇಶದವರು ತಮ್ಮ ಯೋಜನೆ ಪ್ರಕಾರ ತಮ್ಮ ಕೆಲಸ ಮುಂದುವರಿಸಿದರೆ, ಮೈಸೂರು ಸಂಸ್ಥಾನದವರು ಇಬ್ಬರ ನಡುವೆ ಸ್ಯಾಂಡ್‌ವಿಚ್ ಆಗುತ್ತಾರೆ. ನಮಗೆ ಇವೊತ್ತಿನ ದಿವಸ 600 ಟಿ.ಎಂ.ಸಿ. ಫೀಟ್ ವಾಟರ್ ಇದ್ದುದು ಹೋಗುವುದು ಅಲ್ಲದೆ, ಮುಂದಿನ 650 ಟಿ.ಎಂ.ಸಿ. ಎಫ್.ಟಿ.ಗೆ. ಇರುವ ಹಕ್ಕು ಉಳಿಯಲಿಕ್ಕಿಲ್ಲ. ಅದೂ ಅಲ್ಲದೆ ನಾವು ಮುಂದೆ ಅದನ್ನು ಉಪಯೋಗಿಸುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ. ಆದುದರಿಂದ ಬರಗಾಲ ಪ್ರದೇಶವಾದ ಬಿಜಾಪುರ, ರಾಯಚೂರು, ತುಮಕೂರು, ತುಂಗಭದ್ರಾ ಬೇಸಿನ್ ಇವುಗಳ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ, 120 ಕೋಟಿ ರೂಪಾಯಿ ಕೊಟ್ಟರೆ, ಈ ಅಪ್ಪರ್ ಕೃಷ್ಣಾ ಯೋಜನೆಗೆ ಸಾಕಷ್ಟು ಆಗುತ್ತದೆ. ನಮ್ಮಲ್ಲಿ ಇರುವ ಹಣವನ್ನು ಕಾವೇರಿ ಮತ್ತು ಕೃಷ್ಣ ಪ್ರಾಜೆಕ್ಟ್ ಬೇಸಿನ್‌ಗಳ ಹಕ್ಕುಗಳನ್ನು ಪೂರೈಸಲು ಸಾಧ್ಯ ಆಗುತ್ತದೆ. ನಾನು ಈ ಸಭೆಯ ವೇಳೆಯನ್ನು ಹೆಚ್ಚು ತೆಗೆದುಕೊಳ್ಳದೆ ತಮ್ಮ ಮುಂದೆ ಮಂಡಿಸಿರುವ ಗೊತ್ತುವಳಿಗೆ ಸಹಾನುಭೂತಿಯಿಂದ ಮತ್ತು ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಅಧ್ಯಕ್ಷರೇ, ಮೂರು ವರ್ಷದ ಕೆಳಗೆ ಈ ಸಭೆಯಲ್ಲಿ ದೊಡ್ಡ ಜಿಜ್ಞಾಸೆ ನಡೆಯಿತು. ಕೃಷ್ಣಾ ನದಿ ನೀರಿನ ಹಂಚಿಕೆ ಬಗ್ಗೆ ಕೇಂದ್ರ ಸರ್ಕಾರದಿಂದ ಮೈಸೂರು ರಾಜ್ಯಕ್ಕೆ ನ್ಯಾಯ ದೊರಕಲಿಲ್ಲ ಎಂದು ಹಲವಾರು ಜನ ಅಭಿಪ್ರಾಯ ಪಟ್ಟರು. ನಾವು ಸಹ ಕೇಂದ್ರ ಸರ್ಕಾರ ಕೃಷ್ಣಾ ನದಿಯಲ್ಲಿ ಈಗ ನಮಗೆ ಹಂಚಿರತಕ್ಕಂಥ ನೀರು, ನಮಗೆ ಸಾಕಾಗುವುದಿಲ್ಲ, ನಮಗೆ ಇನ್ನೂ ಹೆಚ್ಚು ಪಾಲು ಅದರಲ್ಲಿ ದೊರಕಬೇಕು ಎಂದು ಕೇಳಿದಾಗ ಕೆಲವರು ನಮ್ಮನ್ನು ಪ್ರಶ್ನೆ ಮಾಡಿದರು, ಮೈಸೂರಿನವರು ನೀರನ್ನು ತೆಗೆದುಕೊಂಡು ಏನು ಮಾಡುತ್ತೀರಿ ಎಂದು. ನಮ್ಮಲ್ಲಿ ಹಲವಾರು ಸಂಶಯಗಳು, ಶಂಕೆಗಳು ಆಗಾಗಲೇ ಬಂದವು. ಕೃಷ್ಣಾ ನದಿ ನೀರಿನ ವ್ಯವಹಾರದಲ್ಲಿ ನಾವು ಏನು ಭಾವನಾತ್ಮಕ ಹೋರಾಟವನ್ನು ಮಾಡಿದರೂ ಕೂಡ, ಮೈಸೂರು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ತೆಗೆದುಕೊಂಡು ನೋಡಿದರೆ ನಮಗೆ ಹಂಚಿದಂಥ ನೀರನ್ನು ಸದುಪಯೋಗ ಮಾಡುವ ಶಕ್ತಿ ಈ ರಾಜ್ಯಕ್ಕೆ ಇಲ್ಲ ಎಂದು ನಾವು ಕೆಲವರು ಆಗಲೇ ಅಭಿಪ್ರಾಯಪಟ್ಟೆವು. ಆದರೂ ಮೇಲಿಂದ ಮೇಲೆ ರಾಜ್ಯ ಸರ್ಕಾರದ ಪರವಾಗಿ ಈ ಸಭೆಗೆ ಆಶ್ವಾಸನೆಗಳು ನಿರರ್ಗಳವಾಗಿ ಬಂದಿವೆ. ಕೆಲವು ಕಾಲ ನಮಗೆ ಬಿಡಿ, ಇದನ್ನು ನಾವು ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ ಎನ್ನತಕ್ಕ ಮಾತುಗಳು, ಇನ್ನು ಕೆಲವು ಕಾಲದ ನಂತರ ಕೇಂದ್ರ ಸರ್ಕಾರ ನಮ್ಮ ರಾಜ್ಯ ಸರ್ಕಾರದ ಆಶೋತ್ತರಗಳ ಬಗ್ಗೆ ಸಾಕಾದಷ್ಟು ಸಹಾನುಭೂತಿಯನ್ನು ಇಟ್ಟುಕೊಂಡಿದೆ ಎನ್ನತಕ್ಕ ಆಶ್ವಾಸನೆಗಳನ್ನು ನಾವು ಅನಂತರ ಚರ್ಚೆ ಮಾಡಿದ್ದೇವೆ. ಹಿಂದೆ ಅತ್ಯಂತ ಶೀಘ್ರದಲ್ಲಿ ಕೇಂದ್ರ ಸರ್ಕಾರದವರು ಇದನ್ನು ವಹಿಸಿಕೊಳ್ಳಬೇಕೆಂದು ಮಾಡತಕ್ಕ ನಂಬಿಕೆ ನನಗೆ ಇದೆ ಎಂದು ರಾಜ್ಯಸರ್ಕಾರದ ಪರವಾಗಿ

ನಮಗೆ ಬೇಕಾದಷ್ಟು ಆಶ್ವಾಸನೆಗಳು ಬಂದಿವೆ. ಮೂರು ವರ್ಷವಾದ ಮೇಲೆ ಕೃಷ್ಣಾ ಮೇಲ್ದಂಡೆಯ
ಯೋಜನೆಗೆ ಶಂಕುಸ್ಥಾಪನೆಯನ್ನು ದಿವಗಂತ ಶ್ರೀ ಲಾಲ್ ಬಹದೂರ್ ಶಾಸ್ತ್ರಿಯವರು ಮಾಡಿ ಒಂದು
ವರ್ಷದ ಮೇಲೆ ಆದರೂ ಕೂಡ, ಇದುವರೆಗೆ ನಾವು ನಡೆಸಿದಂತಹ ಕೆಲಸ ಏನು, ನಾವು ಕೇಂದ್ರ
ಸರ್ಕಾರದ ನೆರವನ್ನು ಪಡೆಯುವುದರಲ್ಲಿ ಜಯಶಾಲಿಗಳಾಗಿದ್ದೇವೆ ಎನ್ನುವುದನ್ನು ವಿಮರ್ಶೆ ಮಾಡ
ತಕ್ಕ ಕಾಲ ಈಗ ಬಂದಿದೆ ಎಂದು ನಾನು ಅಭಿಪ್ರಾಯ ಮಾಡುತ್ತೇನೆ. ಈ ಸಭೆಯ ಮಾನ್ಯ ಹಿರಿಯ
ಸದಸ್ಯರಾದಂತಹ ಪಾಟೀಲರವರು ಮಾಡಿದ ಭಾಷಣವನ್ನು ನಾನು ಬಹಳ ವಿಶ್ವಾಸದಿಂದ ಕೇಳಿದೆ.
ಶ್ರೀಮಾನ್ ಪಾಟೀಲರವರ ಕಳಕಳಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಈ ರಾಜ್ಯದ ಪ್ರತಿ
ಯೊಬ್ಬ ಪ್ರಜೆಯೂ, ಪ್ರತಿಯೊಬ್ಬ ಪ್ರಜ್ಞಾವಂತನೂ ಕೂಡ, ಕೃಷ್ಣಾ ಮೇಲ್ದಂಡೆಯ ಕೆಲಸ ಅಗತ್ಯ
ವಾಗಿ ನಡೆಯಬೇಕಾದ ಕೆಲಸ, ಅದರ ಜೊತೆಗೆ ಇನ್ನೂ ಹಲವಾರು ಯೋಜನೆಗಳ ಕೆಲಸ ರಾಜ್ಯದಲ್ಲಿ
ನಡೆಯಬೇಕಾಗಿರತಕ್ಕ ಕೆಲಸ ಎಂದು ಒಪ್ಪಿದ್ದಾರೆ. ಮುಖ್ಯವಾಗಿ ಕಾವೇರಿ ನದಿಗೆ ಸಂಬಂಧಪಟ್ಟ
ನೀರಿನ ಬಗ್ಗೆ ಕೂಡ ನಾವು ಆಲೋಚನೆ ಮಾಡತಕ್ಕವರು, ಅದರ ಬಗ್ಗೆ ಶೀಘ್ರವಾದ ಕಾರ್ಯಕ್ರಮ
ಗಳನ್ನು ಹಾಕಿಕೊಂಡು ಅದಕ್ಕೆ ಸಾಕಾದಷ್ಟು ಹಣವನ್ನು ಒದಗಿಸತಕ್ಕ ಕಾಲ ಬಂದಿದೆ ಎಂದು ನಾನು
ಅಭಿಪ್ರಾಯ ಪಡುತ್ತೇನೆ. ಈ ಕೃಷ್ಣಾ ಯೋಜನೆಯು ಮೊದಲಿನಿಂದ ಎಡವುತ್ತಾ ಬಂದಿದೆ. ನಿನ್ನೆ ದಿನ
ಕೇಂದ್ರದ ಯೋಜನೆಯ ಮಂತ್ರಿ ಶ್ರೀ ಅಶೋಕ ಮೆಹ್ತಾರವರು ಮೈಸೂರು ರಾಜ್ಯ ಸರ್ಕಾರದ
ಆಡಳಿತ ಬಗ್ಗೆ ಟೆಕ್ನೊ ಇಕಾನಾಮಿಕ್ ಸರ್ವೆಯಲ್ಲಿ ಮಾಡಿದಂತಹ ಟೀಕೆಯನ್ನು ಪ್ರಸ್ತಾಪಿಸಿದರು.
ಏನು ಯೋಜನೆಗಳನ್ನು ಹಾಕಿಕೊಂಡರೂ, ಕೇಂದ್ರ ಸರ್ಕಾರದವರು ಕೃಷ್ಣಾಯೋಜನೆಯನ್ನು ತೆಗೆ
ಕೊಂಡರೂ, ಅವರೇ ನೇರವಾಗಿ ಆ ಯೋಜನೆಯನ್ನು ಕಾರ್ಯಗತ ಮಾಡುವುದಿಲ್ಲ, ಈ ಯೋಜನೆ
ಯನ್ನು ಕಾರ್ಯಗತಗೊಳಿಸತಕ್ಕ ಹಣ ರಾಜ್ಯ ಸರ್ಕಾರದ್ದಾಗಿದೆ ; ಮತ್ತು ರಾಜ್ಯ ಸರ್ಕಾರದ ಅಧಿ
ಕಾರಿಗಳಿಂದ ನಡೆಸಲ್ಪಡುತ್ತದೆ, ರಾಜ್ಯ ಸರ್ಕಾರದ ಆಡಳಿತದಲ್ಲಿ ಶಿಥಿಲತೆಯಾದರೆ, ಕೇಂದ್ರ ಸರ್ಕಾರ
ಹಣ ನೆರವಿಗೆ ಕೊಟ್ಟರೂ ಕೂಡ ಅದರ ಪ್ರಯೋಜನವಾಗುವುದಿಲ್ಲ, ಅದರ ಪ್ರಯೋಜನ ಜನತೆಗೆ ಸಿಗು
ವುದಿಲ್ಲ ಎನ್ನುವ ಮಾತನ್ನು ನಾವು ಜ್ಞಾಪಕದಲ್ಲಿಡಬೇಕಾಗುತ್ತದೆ. ಇವತ್ತಿನ ದಿವಸ ಆಡಳಿತದಲ್ಲಿ ಬಿಗಿ
ಇಲ್ಲ, ಆಡಳಿತದಲ್ಲಿ ಶಿಥಿಲತೆ ಉಂಟಾಗಿದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಅಂಥ ಅಭಿ
ಪ್ರಾಯ ಪಡುವವರಲ್ಲಿ ನಾನು ಸಹ ಒಬ್ಬ. ಕೇಂದ್ರ ಸರ್ಕಾರಕ್ಕೆ ಬಂದಿರುವ ಅನುಮಾನವಾದರೂ
ಕೂಡ ಏನು ಎಂಬುದನ್ನು ಯೋಚನೆ ಮಾಡಬೇಕಾದ ಸಂದರ್ಭ ಈಗ ಒದಗಿ ಬಂದಿದೆ. ಮೊನ್ನೆ
ಶ್ರೀ ಅಶೋಕ ಮೆಹ್ತಾರವರು ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಿದರು—" ಇಫೆಕ್ಟಿವ್
ಡಿಸೈನ್ಸ್ ಆಫ್ ಪ್ರೊಜೆಕ್ಟ್ಸ್ " ಕುರಿತು ಹೇಳಿದರು. ಹಾಗೆ ನಾವು ಕೃಷ್ಣಾ ಮೇಲ್ದಂಡೆಯ ಯೋಜ
ನೆಯನ್ನು ತೆಗೆದುಕೊಳ್ಳುತ್ತೇವೆ. ಈಗ ಶರಾವತಿಯ ಬಗ್ಗೆ ನಾವು ಟೀಕೆ ಮಾಡಿದ್ದೇವೆ. ನಿಮ್ಮ
ಡಿಸೈನ್ಸ್ ಸರಿಯಿಲ್ಲ, ಮೊದಲು ಒಂದು ರೀತಿ ಯೋಜನೆ ಮಾಡುತ್ತೀರಿ, ಅನಂತರ ಕಾರ್ಯ ರೂಪಕ್ಕೆ
ಬರುವಾಗ ನಿಮ್ಮ ಯೋಜನೆಗಳೆಲ್ಲಾ ತಿರುವುಮುರುವು ಆಗುತ್ತದೆ ಎಂದು ನಾನಾದರೂ ನಿರೀಕ್ಷೆ
ಮಾಡಬೇಕಾಗಿದೆ. ಇಲ್ಲಿ ಬಂದಿರುವ ಟೀಕೆಗಳನ್ನು ಗಮನಕ್ಕೆ ತೆಗೆದುಕೊಂಡು ರಾಜ್ಯ ಸರ್ಕಾರದವರು
ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು, ಅದರ ಡಿಸೈನಿನಲ್ಲಿ ಮತ್ತು ಅದರ ಪ್ಲಾನನ್ನು ರಚನೆ
ಮಾಡುವಾಗ, ಬಹಳ ಬುದ್ಧಿವಂತಿಕೆಯಿಂದ ಮಾಡುತ್ತಾರೆಂದು ನಾನಾದರೂ ನಿರೀಕ್ಷೆ ಮಾಡಿದ್ದೆನು.
ಆದರೆ ಆದದ್ದು ಏನು, ಶಂಕುಸ್ಥಾಪನೆ ಮಾಡಿದ ಜಾಗ ಒಂದು, ಕಟ್ಟೆಯನ್ನು ಕಟ್ಟುವುದಕ್ಕೆ ಪ್ರಯತ್ನ
ಮಾಡಿದ ಜಾಗ, ಒಂದು. ಅನಂತರ ಕಟ್ಟೆಯನ್ನು ಬದಲಾವಣೆ ಮಾಡಬೇಕೆಂದು ತೀರ್ಮಾನ ತೆಗೆದು
ಕೊಂಡಿದ್ದಾರೆ. ಅನಂತರ ಈಗ ಕಂಟ್ರಾಕ್ಟರು ಸುಮಾರು 8–10 ಲಕ್ಷ ರೂಪಾಯಿಗಳನ್ನು ಪರಿಹಾರ
ರೂಪದಲ್ಲಿ ಕೇಳಿದ್ದಾರೆ, ಎನ್ನತಕ್ಕ ವರದಿ ಕೂಡ ನಮಗೆ ಬಂದಿದೆ. ಅಂತಹ ವ್ಯವಹಾರಗಳಿಂದ
ಕೇಂದ್ರ ಸರ್ಕಾರಕ್ಕಾಗಲೀ, ಜನತೆಗಾಗಲೀ ನಿಮ್ಮ ಮೇಲೆ ನಂಬಿಕೆ ಬರುತ್ತದೆಯೋ ಎನ್ನುವುದು
ಮೂಲಭೂತವಾದ ಪ್ರಶ್ನೆ. ಈಗ ನಾನು ಈ ನಿರ್ಣಯವನ್ನು ವಿರೋಧ ಮಾಡುತ್ತಾ ಇಲ್ಲ. ಹಿಂದೆ
ಶಾಸನ ಸಭೆಯ ವೇದಿಕೆಯ ಮೇಲೆ ಅರಿಕೆ ಮಾಡಿಕೊಂಡಿದ್ದೆವು. ಈ ಕೃಷ್ಣಾ ನದಿಯ ಯೋಜನೆ
ಯನ್ನು ಕೇಂದ್ರ ಸರ್ಕಾರವೇ ವಹಿಸಿಕೊಳ್ಳಬೇಕು, ಅದರ ಬಹುತೇಕ ಹಣ ವ್ಯವಸ್ಥೆಯನ್ನು ಕೇಂದ್ರ
ಸರ್ಕಾರವೇ ಮಾಡಬೇಕೆಂದು ಒತ್ತಾಯ ಮಾಡಿರುವವರಲ್ಲಿ ನಾನೂ ಒಬ್ಬ. ನಾನು ವೈಯಕ್ತಿಕ
ವಾಗಿ ಯಾವ ಟೀಕೆಯನ್ನಾಗಲೀ ಮಾಡಬೇಕು ಎನ್ನತಕ್ಕ ಉದ್ದೇಶದಿಂದ ಈ ಮಾತುಗಳನ್ನು
ಆಡುತ್ತಿಲ್ಲ. ಆದರೆ ನಾವು ಮಾಡತಕ್ಕ ಕೆಲಸ ಜನತೆ ಮತ್ತು ಕೇಂದ್ರಸರ್ಕಾರ ಇವರಿಬ್ಬರಲ್ಲೂ
ನಂಬಿಕೆ ಬರತಕ್ಕ ಕೆಲಸ ಮಾಡುತ್ತಾ ಇಲ್ಲ. ಅದರಿಂದಾಗಿ ಈ ದಿವಸ ನಮ್ಮ ಕೃಷ್ಣಾ ಮೇಲ್ದಂಡೆ
ಯೋಜನೆಗೆ ಹಣ ಸಿಗುವ ಸಂದರ್ಭವಿಲ್ಲ ಮತ್ತು ಯಾವ ಯೋಜನೆಯಾಗಲೀ ರಾಜ್ಯಸರ್ಕಾರ
ಕೈಗೊಂಡರೆ ಅದಕ್ಕೆ ಹಣ ನಾನು ಕೊಡುತ್ತೇನೆ ಎಂದು ಮುಂದೆ ಬರತಕ್ಕ ಜನಗಳು ಕೂಡ ಕಡಿಮೆ
ಯಾಗಿದೆ ಎನ್ನುವುದನ್ನು ನಾವೆಲ್ಲಾ ಬಹಳ ವಿಷಾದದಿಂದ ಮನಗಾಣಬೇಕಾಗಿದೆ. ನಾವೆಲ್ಲರೂ ಹೇಳ
ಬೇಕಾಗುತ್ತದೆ, ಮೈಸೂರು ಹಿಂದೆ ಉಳಿದಿರತಕ್ಕ ರಾಜ್ಯ ಒಂದು ಕಾಲದಲ್ಲಿ ಅದು ಮುಂದುವರಿ

(ಶ್ರೀ ಎಸ್. ಎಂ. ಕೃಷ್ಣ)

ದಿತ್ತು, ಈಗ ಕಾರಣಾಂತರಗಳಿಂದ ಹಿಂದೆ ಬಿದ್ದಿದೆ, ಹಿಂದೆ ಬಿದ್ದ ರಾಜ್ಯವನ್ನು ಕೈಹಿಡಿದು ಎತ್ತುವಂತಹ ನೈತಿಕ ಜವಾಬ್ದಾರಿ ಕೇಂದ್ರಸರ್ಕಾರಕ್ಕೆ ಇದೆ. ಒಂದು ಶರೀರದ ಎಲ್ಲಾ ಅಂಗಗಳೂ ಪುಷ್ಟಿಯಾಗಿ ಬೆಳೆದರೆ ಅದು ಆರೋಗ್ಯದ ಸೂಚನೆ. ಆದರೆ, ಕೇಂದ್ರಸರ್ಕಾರ ಕೆಲವೇ ಅಂಗಗಳನ್ನು ಪುಷ್ಟಿಯಾಗಿ ಬೆಳೆಸಿಕೊಂಡು ಬರುತ್ತಿದೆ. ಮದ್ರಾಸ್ ಉದ್ಯಮಗಳ ದಿಕ್ಕಿನಲ್ಲಿ ಪುಷ್ಟಿಯಾಗಿ ಬೆಳೆದಿದೆ. ಆಂಧ್ರಪ್ರದೇಶ ವ್ಯವಸಾಯದ ದಿಕ್ಕಿನಲ್ಲಿ ಪುಷ್ಟಿಯಾಗಿ ಬೆಳೆದು ಬಂದಿದೆ. ಆದರೆ, ಮೈಸೂರು ಯಾವ ದಿಕ್ಕಿನಲ್ಲಿ ಪುಷ್ಟಿಯಾಗಿ ಬೆಳೆದಿದೆ? ಕೇರಳ ರಾಜ್ಯ ಯಾವ ದಿಕ್ಕಿನಲ್ಲಿ ಪುಷ್ಟಿಯಾಗಿ ಬೆಳೆದಿದೆ ಎನ್ನುವುದನ್ನೆಲ್ಲಾ ನಾವು ಆಲೋಚನೆ ಮಾಡಬೇಕಾಗಿದೆ. ಇದೇ ಸಂದರ್ಭದಲ್ಲಿ ನಾವು ಕೆಲವರು, ಕೇಂದ್ರಸರ್ಕಾರ ದಕ್ಷಿಣ ರಾಜ್ಯಗಳ ಬಗ್ಗೆ ಮಲತಾಯಿ ಧೋರಣೆಯನ್ನು ತಾಳಿದೆ ಎನ್ನತಕ್ಕ ದೂರನ್ನು ನಾವು ಹೇಳುತ್ತಾ ಬಂದಿದ್ದೇವೆ. ನಮ್ಮ ರಾಜ್ಯ ಸರ್ಕಾರದವರು ಕೂಡ ಕೆಲವು ಸಂದರ್ಭಗಳಲ್ಲಿ ದಕ್ಷಿಣದ ರಾಜ್ಯಕ್ಕೆ ನ್ಯಾಯ ದೊರಕಿಲ್ಲ ಎನ್ನತಕ್ಕ ಮಾತುಗಳನ್ನು ಆಗಿಂದಾಗ್ಗೆ ಆಡುತ್ತಾ ಬಂದಿದ್ದಾರೆ. ಕೆಲವು ಸಮಯ ಆ ಮಾತುಗಳನ್ನು ಆಡದೆ ಹೋದರೆ ಅವರಿಗೆ ನೋವು ಉಂಟಾಗಿಲ್ಲ ಎನ್ನುವ ಅಭಿಪ್ರಾಯದಲ್ಲಿ ಮಾತ್ರ ಅದನ್ನು ಹೇಳುತ್ತಿದ್ದಾರೆ. ಇವರಿಗೆ ಆ ಮಾತುಗಳನ್ನು ಹೇಳತಕ್ಕ ಧೈರ್ಯವಾಗಲೀ, ಶಕ್ತಿಯಾಗಲಿ, ಇಲ್ಲ ಎನ್ನುವುದಕ್ಕೆ ಮಾತ್ರ ಇವರು ಹೇಳುತ್ತಿದ್ದಾರೆಯೇ ಹೊರತು ಬೇರೇನೂ ಅಲ್ಲ. ಮದ್ರಾಸಿನವರಿಗೇನೇ ಕೇಂದ್ರ ಸರ್ಕಾರದವರು ಬಹಳ ಅನುಕೂಲ ಮಾಡಿಕೊಟ್ಟಿರಬೇಕಾದರೆ ಅದಕ್ಕೆ ಏನಾದರೂ ಒಂದು ಕಾರಣ ಇರಬೇಕು. ಇದಕ್ಕೆ ಎರಡು ಕಾರಣವಿರಬಹುದು ಎಂದು ನನ್ನ ಮನಸ್ಸಿಗೆ ತೋರುತ್ತದೆ. ಇವತ್ತು ಮದ್ರಾಸ್ ಸರ್ಕಾರದವರು ಮದ್ರಾಸ್ ರಾಜ್ಯದಲ್ಲಿ ನಿರ್ಮಾಣ ಮಾಡಿರತಕ್ಕ ಬಹಳ ದೊಡ್ಡ ಪರಂಪರೆ ಎಂದು ಈ ದಿವಸ ಕೂಡ ಜವಾಬ್ದಾರಿಯುತವಾದಂತ ರಾಜತಂತ್ರಿಕ ವಿಮರ್ಶಕರ ಅಭಿಪ್ರಾಯವಾಗಿದೆ. ಬಹುಶಃ ಇಂಡಿಯಾ ದೇಶದಲ್ಲಿ ಮದ್ರಾಸ್ ಮತ್ತು ಪಂಜಾಬ್ ಇವೆರಡು ರಾಜ್ಯ ಸರ್ಕಾರಗಳು ಒಳ್ಳೆಯ ಆಡಳಿತ ವ್ಯವಸ್ಥೆಯನ್ನು ಪಡೆದುಕೊಂಡು ಬಂದಿವೆ ಎಂಬ ಅಭಿಪ್ರಾಯವನ್ನು ಹಿಂದೆ ಒಂದು ಸಾರಿ ಶ್ರೀ ಅಶೋಕ ಮೆಹ್ತಾರವರು ವಿರೋಧಪಕ್ಷದಲ್ಲಿದ್ದಾಗ ವ್ಯಕ್ತಪಡಿಸಿದ್ದರು. ಪಂಜಾಬ್ ಕೂಡ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಬಹಳ ಒಳ್ಳೆಯ ಪ್ರಗತಿಯನ್ನು ಸಾಧನೆ ಮಾಡಿದೆ. ಈ ಮದ್ರಾಸ್ ರಾಜ್ಯವು ಒಳ್ಳೆಯ ಆಡಳಿತವನ್ನು ಪಡೆಯುವುದರ ಜೊತೆಗೆ ಮದ್ರಾಸ್ ರಾಜ್ಯದ ರಾಷ್ಟ್ರೀಯ ನಾಯಕತ್ವದಲ್ಲಿ ಬಹಳ ಹೆಚ್ಚಿನ ಜನರನ್ನು ಸೃಷ್ಟಿಮಾಡಿದ್ದಾರೆ. ಕಾಂಗ್ರೆಸ್ ಅಧ್ಯಕ್ಷರು ಕೂಡ ಮದ್ರಾಸಿನವರು. ಮತ್ತು ಮದ್ರಾಸಿನವರು ಕೇಂದ್ರದ ಮಂತ್ರಿಮಂಡಲದಲ್ಲಿ ಕೂಡ ಬಹಳ ಪ್ರಭಾವಶಾಲಿಗಳಾಗಿದ್ದಾರೆ ಮತ್ತು ಪ್ರಮುಖವಾದ ಸ್ಥಾನಗಳನ್ನು ಅಲಂಕರಿಸಿಕೊಂಡಿದ್ದಾರೆ. ಆದ್ದರಿಂದ ಮದ್ರಾಸ್ ರಾಜ್ಯದ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಬರುವುದರಲ್ಲಿ ಅವರಿಗೆ ಹೆಚ್ಚು ಆಸಕ್ತಿ ಇದೆ. ಮತ್ತು ಆಂಧ್ರಪ್ರದೇಶದ ವಿಚಾರದಲ್ಲೂ ಕೂಡ ನಾವು ಈ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಇನ್ನು ಕೇರಳದ ವಿಷಯ ಮಾತನಾಡುವಾಗ, ಕೇರಳದಲ್ಲಿ ಈ ಒಂದು ಕಮ್ಯುನಿಸ್ಟ್‌ಗೊಂದಲ ಏನಿದೆ, ಕಮ್ಯುನಿಸ್ಟರ ವಿರೋಧ ಏನಿದೆ, ಅದು ಕೇಂದ್ರ ಸರ್ಕಾರದ ಕಣ್ಣನ್ನು ತೆರೆಸಿದೆ, ಮತ್ತು ಕಿವಿಯನ್ನು ಕೂಡ ಚುರುಕುಗೊಳಿಸಿದೆ. ಆದ್ದರಿಂದ ಕೇರಳದಲ್ಲಿ ಏನೇ ನಡೆದರೂ ಕೇಂದ್ರ ಸರ್ಕಾರವು ನಾನು ಮುಂದೆ, ನಾನು ಮುಂದೆ ಎಂದು ಹೊರಟು ನಿಂತಿದೆ.

4-00 P.M.

ಆದರೆ ಮೈಸೂರು ರಾಜ್ಯದ ಮಟ್ಟಿಗೆ ಮಾತ್ರ ನಮ್ಮಲ್ಲಿ ಈ ರಾಷ್ಟ್ರೀಯ ಮಟ್ಟದಲ್ಲಿ ನಾಯಕತ್ವವನ್ನು ರೂಪಿಸಿಕೊಳ್ಳತಕ್ಕದ್ದು ಅಂತಿರಲಿ, ಕೇಂದ್ರ ಸರ್ಕಾರದಲ್ಲಿ ನಮ್ಮ ಬಗ್ಗೆ ಮಾತನಾಡತಕ್ಕ ಜನರೂ ಕೂಡ ಇಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮೈಸೂರು ರಾಜ್ಯ ಒಂದು ದೊಡ್ಡ ರಾಜ್ಯ, ನಮ್ಮ ಇಂಡಿಯನ್ ಫೆಡರೇಷನ್ನಿನಲ್ಲಿ ಈ ದಿವಸ ಕೇಂದ್ರ ಸರ್ಕಾರದ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿ ಪ್ರತಿನಿಧಿಸತಕ್ಕ ಒಬ್ಬರೂ ಕೂಡ ಇಲ್ಲದೇ ಇರತಕ್ಕದ್ದು ಎಷ್ಟು ಅವಹೇಳನಕರ ಘಟನೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ನಾನು ಇಂಥವರನ್ನು ಮಂತ್ರಿ ಮಾಡಿ ಎಂದು ಕೇಳುವುದಕ್ಕೆ ನಿಂತಿಲ್ಲ, ಯಾರು ಮಂತ್ರಿಯಾದರೂ ವಿರೋಧ ಪಕ್ಷದವರನ್ನು ಮಂತ್ರಿಗಳಾಗಿ ಮಾಡಲಿಕ್ಕೆ ಕಳುಹಿಸುವುದಿಲ್ಲ, ಯಾರಾದರೂ ಬಿಳಿ ಟೋಪಿ ಹಾಕಿರತಕ್ಕ ಜನರು ಮಂತ್ರಿಯಾಗುವುದಕ್ಕೆ ಸಾಧ್ಯತೆ ಇದೆ. ಆದ್ದರಿಂದ ನಿಮ್ಮ ಒತ್ತಾಯ, ನಿಮ್ಮ ನೈತಿಕವಾದ ಒತ್ತಾಯ, ಪರೋಕ್ಷವಾದಂತಹ ಒತ್ತಾಯ ಇವುಗಳನ್ನು ಮಾಡತಕ್ಕ ಶಕ್ತಿ ನಿಮಗೆ ಎಲ್ಲಿ ಅಡಗಿ ಹೋಗಿದೆ ಎನ್ನುವುದನ್ನು ಈ ದಿವಸ ಪ್ರಶ್ನೆ ಮಾಡಬೇಕಾಗಿದೆ. ಹಿಂದೆ ಒಂದು ಸಾರಿ ನಾನು ವ್ಯಂಗವಾಗಿ ಅಲ್ಲ, ಬಹಳ ಕಳಕಳಿಯಿಂದ ಹೇಳಿದೆ, ನೊಂದ ಹೃದಯದಿಂದ ಹೇಳಿದೆ, ಶ್ರೀಮಾನ್ ನಿಜಲಿಂಗಪ್ಪನವರಿಗೆ ಬಹಳ ಪೂಜನೀಯವಾದ ಸ್ಥಾನವನ್ನು ಕೇಂದ್ರದ ನಾಯಕ ವರ್ಗ ಕೊಟ್ಟಿದೆ. ಅದಕ್ಕೆ ಬಹಳ ಸಂತೋಷ ಪಡುತ್ತೇವೆ, ಹೆಮ್ಮೆ

ಪಡುತ್ತೇವೆ. ಆದರೆ ಮೈಸೂರು ರಾಜ್ಯದ ಹಿತಾಸಕ್ತಿ ಏನಾಯಿತು! ಇದನ್ನು ಕಾಪಾಡುವುದು ಶ್ರೀಮಾನ್ ನಿಜಲಿಂಗಪ್ಪನವರ ಕರ್ತವ್ಯವಲ್ಲವೇ ಎಂಬುದನ್ನು ನಾವು ಯೋಚನೆ ಮಾಡಬೇಕು. ಒಂದು ಸಣ್ಣ ಉದಾಹರಣೆಯನ್ನು ನಿಮಗೆ ಕೊಡುತ್ತೇನೆ. ರಾಜ್ಯಸರ್ಕಾರ ಸಿಟ್ಟಿಗೆ ಎದ್ದು ನಿಂತು ರಾಜ್ಯದ ಜನತೆ ಎಲ್ಲಾ ರಾಜ್ಯ ಸರ್ಕಾರದ ಪರವಾಗಿ ನಿಂತು ಒಂದು ವಿಚಾರಕ್ಕೆ ಹೋರಾಟ ಮಾಡತಕ್ಕ ನಿರ್ಧಾರ ಮಾಡಿದರೆ ಕೇಂದ್ರಸರ್ಕಾರ ಮಣಿಯುತ್ತದೆ, ಕೇಂದ್ರದ ನಾಯಕ ವರ್ಗ ಮಣಿಯುತ್ತದೆ ಎನ್ನುವುದಕ್ಕೆ ಸ್ಪಷ್ಟವಾದ ನಿದರ್ಶನ ಕೆಲವೇ ತಿಂಗಳುಗಳ ಹಿಂದೆ ಗೋವಾ ಬಗ್ಗೆ ಕೇಂದ್ರ ನಾಯಕ ವರ್ಗದವರು ಒಂದು ನಿರ್ಧಾರ ತೆಗೆದುಕೊಂಡರು, ಅದರ ಪ್ರಕಾರ ಅತಿ ಶೀಘ್ರದಲ್ಲಿ ಗೋವೆಯ ಚುನಾವಣೆ ನಡೆಯಬೇಕು ಆದರ ಆಧಾರದ ಮೇಲೆ ಗೋವೆ ಮಹಾರಾಷ್ಟ್ರಕ್ಕೆ ಹೋಗಬೇಕೇ ಅಥವಾ ಮೈಸೂರಿಗೆ ಸೇರಬೇಕೇ ಎನ್ನುವುದರ ಇತ್ಯರ್ಥವಾಗಬೇಕು ಎಂದು ಹೇಳಿ ಕೇಂದ್ರ ಕಾಂಗ್ರೆಸ್ ವರಿಷ್ಟ ವರ್ಗ ಒಂದು ನಿರ್ಧಾರ ತೆಗೆದುಕೊಂಡಿತು. ಈ ಒಂದು ಸಣ್ಣ ನಿರ್ಧಾರ ಮೈಸೂರು ಜನತೆಯ ಮೇಲೆ ಎಂಥಾ ತೀವ್ರವಾದ ಪರಿಣಾಮವನ್ನುಂಟು ಮಾಡಿತು ಎಂಬುದನ್ನು ನೋಡಿ. ಮೈಸೂರು ರಾಜ್ಯ ಸರ್ಕಾರದವರು ಈ ನಿರ್ಧಾರದ ಮೇಲೆ "ನಾವು ನಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಕೊಡುತ್ತೇವೆ". ಎನ್ನತಕ್ಕಂಥ ಪ್ರಕಟಣೆಯನ್ನು ಹೊರಡಿಸಿದರು ಮತ್ತು ಇಡೀ ರಾಜ್ಯ ವಿರೋಧ ಮತ್ತು ಸರ್ಕಾರಿ ಪಕ್ಷ ಎನ್ನತಕ್ಕ ಭೇದ ಭಾವನೆ ಇಲ್ಲದೆ ಗೋವಾ ಬಗ್ಗೆ ನಮ್ಮಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ, ಗೋವಾದ ಬಗ್ಗೆ ನಮ್ಮಲ್ಲಿ ಯಾವ ಭೇಧ ಭಾವವೂ ಇಲ್ಲ ಎನ್ನತಕ್ಕ ದೃಷ್ಟಿಯಿಂದ ನಾವು ರಾಜ್ಯ ಸರ್ಕಾರದ ಪರವಾಗಿ ನಿಂತು ಗೋವಾದ ಬಗ್ಗೆ ಹೋರಾಟ ಮಾಡಿದ್ದೇವೆ. ಅದರಿಂದ ಪ್ರತಿಕ್ರಿಯೆ ಏನು? ಫಲತಾಂಶ ಏನು ಆಯಿತು ಎಂಬುದನ್ನು ಮರೆಯಬಾರದು. ಆದ್ದರಿಂದ ಗೋವೆಯ ಬಗ್ಗೆ ರಾಜ್ಯ ಸರ್ಕಾರ ಯಾವ ನಿಲುವನ್ನು ತೆಗೆದುಕೊಂಡಿತೋ ಅಂಥಾದ್ದೇ ನಿಲುವನ್ನು ಈ ಕೃಷ್ಣಾ ಮೇಲ್ದಂಡೆ ಯೋಜನೆಗೂ ಕೂಡ ತೆಗೆದುಕೊಳ್ಳತಕ್ಕ ಸಾಮರ್ಥ್ಯವನ್ನು ರಾಜ್ಯಸರ್ಕಾರ ತೋರಿಸುತ್ತದೆಯೇ ಎನ್ನುವುದನ್ನು ನಾವು ವಿರೋಧ ಪಕ್ಷದವರು ಈ ದಿವಸ ಕೇಳುತ್ತಾ ಇದ್ದೇವೆ. ಇದು ಒಂದು ಸಾಧಾರಣವಾದಂತಹ ಹೋರಾಟ ಅಲ್ಲ. ಎಲ್ಲಾ ಜನಗಳಿಗೂ ಕೂಡ ಸಾಮಾಜಿಕ ನ್ಯಾಯ ಸಿಕ್ಕಬೇಕು, ಸಮಾನ ನ್ಯಾಯ ಸಿಕ್ಕಬೇಕು ಎನ್ನುವುದಕ್ಕೆ ದ್ಯೋತಕವಾದ ಹೋರಾಟ ಇದು. ನಿನ್ನೆತಾನೆ ಮಂತ್ರಿಗಳಾದ ಅಶೋಕ ಮೆಹ್ತಾರವರು ಹೇಳಿದ್ದಾರೆ, ಒಂದು ಕಡೆ ಕೇಂದ್ರ ಸರ್ಕಾರದವರು, ಕೇಂದ್ರ ಯೋಜನಾ ಮಂಡಲಿಯವರು ಈಗ ಮೈಸೂರು ರಾಜ್ಯ ಸರ್ಕಾರಕ್ಕೆ ಹೇಗೆ ಸಹಾಯ ಮಾಡಬೇಕೋ ನಮಗೆ ಅರ್ಥವಾಗುವುದಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ನೇರವಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಅವರು ನಿನ್ನೆ ಒಂದು ಪತ್ರಿಕಾ ಸಂದರ್ಶನದಲ್ಲಿ ತಿಳಿಸಿದ್ದಾರೆ. ಎಂದ ಮೇಲೆ ನಾವು ಅದನ್ನು ಅಧಿಕಾರಯುತವಾದ ಹೇಳಿಕೆ ಎಂದು ತೆಗೆದುಕೊಳ್ಳದೇ ಹೋದರೂ ಕೂಡ ಶ್ರೀಮಾನ್ ಅಶೋಕ ಮೆಹ್ತಾರವರ ಮನಸ್ಸು ಯಾವ ರೀತಿ ವರ್ತಿಸುತ್ತಾ ಇದೆ ಎನ್ನುವುದಕ್ಕೆ ಅದು ಸೂಚನೆ ಮಾತ್ರ ಎಂಬುದಾಗಿ ತಿಳಿದುಕೊಳ್ಳಬಹುದಾಗಿದೆ. ಈ ಸೂಚನೆಯನ್ನು ನಾವು ಗಮನದಲ್ಲಿಟ್ಟುಕೊಂಡು ಹೋರಾಟ ಮಾಡಬೇಕಾಗಿರತಕ್ಕ ಸಮಯ ಈಗ ಬಂದಿದೆ ಎಂದು ನಾನು ಈ ದಿವಸ ಆಲೋಚನೆ ಮಾಡುತ್ತಾ ಇದ್ದೇನೆ. ಯಾವುದೇ ದೃಷ್ಟಿಯಿಂದ ಈ ವಿಚಾರವನ್ನು ವಿಮರ್ಶೆ ಮಾಡಿದರೂ ಹಿಂದುಳಿದಿರುವಿಕೆ ಮತ್ತು ಸಮಾನವಾದಂತಹ ನ್ಯಾಯ ಈ ಎರಡು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಈ ದಿವಸ ನಮ್ಮ ಮನೆಯ ಮುಂದಿರತಕ್ಕ ಶ್ರೀಮಾನ್ ಪಾಟೀಲ್‌ರವರ ನಿರ್ಣಯವನ್ನು ನಾವು ಸಮರ್ಥನೆ ಮಾಡುತ್ತೇವೆ. ಸಮರ್ಥನೆ ಮಾಡಿ ರಾಜ್ಯ ಸರ್ಕಾರದ ಕೈಗೆ ಅಧಿಕಾರವನ್ನು ಕೊಡುತ್ತಾ ಇದ್ದೇವೆ, ಈ ಯೋಜನೆಯ ಬಗ್ಗೆ ಇಡೀ ಶಾಸನಸಭೆ ರಾಜ್ಯಸರ್ಕಾರದ ಹಿಂದೆ ಇದೆ. ಎಂದು ಹೇಳಿ ಅದಕ್ಕೆ ಬೆಂಬಲ ಕೊಡುತ್ತೇವೆ. ಮುಂದೆ ಒಂದು ಪಕ್ಷ ಅವರಿಂದ ನಮಗೆ ಸಮಾಧನಕರವಾದಂಥ ನ್ಯಾಯ ಸಿಕ್ಕದೇ ಹೋದರೆ ರಾಜ್ಯ ಸರ್ಕಾರ ಏನು ಮಾಡುವುದಕ್ಕೆ ತಯಾರಾಗಿದೆ ಎಂಬ ಪ್ರಶ್ನೆಗೆ ನಾನು ರಾಜ್ಯಸರ್ಕಾರದ ವಕ್ತಾರರಿಂದ ಉತ್ತರವನ್ನು ಅಪೇಕ್ಷೆ ಮಾಡುತ್ತೇನೆ. ಒಂದು ಮಾತನ್ನು ಈ ಸಮಯದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಕೃಷ್ಣಾ ನದಿಯ ಯೋಜನೆಯಿಂದ ಕೇವಲ ಬಿಜಾಪುರ, ಧಾರವಾಡ ಮತ್ತು ಇನ್ನೂ ಕೆಲವು ಜಿಲ್ಲೆಗಳ ಜನಕ್ಕೆ ಮಾತ್ರ ಇದರ ಪ್ರತಿಫಲ ದೊರೆಯುತ್ತದೆ ಎಂಬ ವಾದವನ್ನು ನಾನು ಒಪ್ಪುವುದಿಲ್ಲ. ಇಡೀ ದೇಶವೇ ಈ ಯೋಜನೆಯಿಂದ ಪ್ರತಿಫಲ ಪಡೆಯುತ್ತದೆ ಅನ್ನುವುದನ್ನು ನಾವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ದೇಶದ ಹಿತದೃಷ್ಟಿಯಿಂದ ನಾವು ಈ ಯೋಜನೆಯ ಬಗ್ಗೆ ಬಹಳ ದೂರ ಆಲೋಚನೆ ಮಾಡಬೇಕಾಗಿದೆ. ಬಹಳ ದೂರ ಆಲೋಚನೆ ಮಾಡವೇ ಹೋದರೆ ಕೇವಲ ಟೆಕ್ನಿಕಲ್ ಡಿಫಿಕಲ್ಟೀಸ್ ಅನ್ನುವುದನ್ನೇ ನಾವು ಮುಂದೆ ಹೂಡಿ, ಈ ರಾಜ್ಯಸರ್ಕಾರ ದೊಡ್ಡ ಸರ್ಕಾರ ಹಿಂದೆ ಕೊಟ್ಟಿರತಕ್ಕ ಹಣವನ್ನು ಸರಿಯಾಗಿ ಖರ್ಚು ಮಾಡುತ್ತಿಲ್ಲ ಮತ್ತು ನ್ಯಾಷನಲ್ ರಿಸೋರ್ಸ್‌ನ್ನು ಹೆಚ್ಚು ಮಾಡಿಲ್ಲ ಎಂದು ಹೇಳಿ ಈ ರೀತಿಯ ನೆಪಗಳನ್ನು ಹೂಡಿ ಈ ಮುಖ್ಯವಾದಂಥ ಯೋಜನೆಗೆ ಹಣವನ್ನು ಒದಗಿಸುವುದನ್ನು ನಿಧಾನ ಮಾಡು

(ಶ್ರೀ ಎಸ್. ಎಂ. ಕೃಷ್ಣ)

ವುದಾಗಲಿ ಅಥವಾ ಒದಗಿಸುವುದಕ್ಕೆ ಸಾಕಾದಷ್ಟು ಅಸ್ತಿ ಅಂತಹ ತಂದೊಡ್ಡುವುದಾಗಲಿ ಯಾವುದನ್ನೂ ಕೂಡ ನಮ್ಮ ರಾಜ್ಯ ಸರ್ಕಾರ ಸಹಿಸಿ ಕುಳಿತಿರುವುದಕ್ಕೆ ಸಾಧ್ಯವಿಲ್ಲ ಎಂಬ ಒಂದು ನಿಲುವನ್ನು ರಾಜ್ಯ ಸರ್ಕಾರ ಪಡೆದುಕೊಳ್ಳಬೇಕೆಂದು ಈ ಸಮಯದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀಮಾನ್ ಪಾಟೀಲ್‌ರವರು ಇಂಡಿಯಾ ದೇಶದ ಸರಾಸರಿ ನೀರಾವರಿ ಪ್ರದೇಶ 24 ಎಂದು ಹೇಳಿದರು ಅದರಲ್ಲಿ ಮೈಸೂರು ರಾಜ್ಯದ್ದು ಕೇವಲ 6 ಅಥವಾ 7 ಇರಬೇಕು ಎಂದು ನಾನು ತಿಳಿಯುತ್ತೇನೆ, ನಾಗಾರ್ಜುನ ಸಾಗರದ ಕೆಲಸಕಾರ್ಯಗಳಿಗೆ ಕೇಂದ್ರಸರ್ಕಾರದವರು 63 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ನಾವು ಕೃಷ್ಣಾ ನದಿ ನೀರನ್ನು ಹಂಚುವ ಬಗ್ಗೆ ಮಾತನಾಡುವಾಗಲೆಲ್ಲಾ ನಾಗಾರ್ಜುನ ಸಾಗರದ ವಿಚಾರವನ್ನೂ ಕೂಡ ಮಾತನಾಡುತ್ತಲೇ ಇದ್ದೇವೆ. ಮೊನ್ನೆ ಮಹಾರಾಷ್ಟ್ರದ ಶ್ರೀಮಾನ್ ಚವಾನ್‌ರವರು ಭೀಮಾ ಪ್ರಾಜೆಕ್ಟಿಗೆ ಶಂಕುಸ್ಥಾಪನೆ ಹಾಕಿದರು, ಆ ಸಂದರ್ಭದಲ್ಲಿ ಅವರು ಮಾಡಿದ ಭಾಷಣ ಗಮನಾರ್ಹವಾದ ಭಾಷಣ, ಇನ್ನು 18 ತಿಂಗಳ ಕಾಲದಲ್ಲಿ ಈ ಭೀಮಾ ಯೋಜನೆಯನ್ನು ಪೂರೈಸತಕ್ಕ ಪತಿಜ್ಞೆಯನ್ನು ಮಾಡಿದ್ದೇವೆ ಎಂದು ಅವರು ಹೇಳಿದರು. ಅಂತಹ ನಿರ್ದಿಷ್ಟವಾದ ನಿಲುವು ನಮ್ಮ ರಾಜ್ಯ ಸರ್ಕಾರದಲ್ಲಿ ಬರಬೇಕು. ನಾವು ದಿವಂಗತ ಶಾಸ್ತ್ರಿಯವರಿಂದ ಶಂಕುಸ್ಥಾಪನೆ ಮಾಡಿಸಿದಾಗ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಎಷ್ಟು ವರ್ಷದಲ್ಲಿ ಮುಗಿಸುತ್ತೇವೆ ಎಂಬ ಪ್ರತಿಜ್ಞೆಯನ್ನು ನೀವು ತೆಗೆದುಕೊಂಡಿರಿ ಎಂದು ಕೇಳಬಯಸುತ್ತೇನೆ. 5 ವರ್ಷವೇ ? 10 ವರ್ಷವೇ ? ಅಥವಾ 15 ವರ್ಷವೇ ? ಈ ವಿಚಾರಗಳನ್ನೆಲ್ಲಾ ಯೋಚನೆ ಮಾಡಿದರೆ ನಮಗೆ ಕೃಷ್ಣಾ ಮೇಲ್ದಂಡೆ ಯೋಜನೆ ಬೇಕೇಬೇಕು ಎಂದರೆ ಯಾರೂ ಕೊಡುವುದಕ್ಕೆ ಮುಂದೆ ಬರುವುದಿಲ್ಲ ಎನ್ನುವ ಮಾತನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿದೆ. ಈ ಸಮಯದಲ್ಲಿ ಈ ಯೋಜನೆಗೆ ಕೇಂದ್ರಸರ್ಕಾರದಿಂದ ಸಾಕಾದಷ್ಟು ನೆರವು ದೊರೆಯದೆ ಹೋದರೆ—ಯಾರನ್ನೂ ವೈಯಕ್ತಿಕವಾಗಿ ಇದಕ್ಕೆ ಹೊಣೆ ಮಾಡತಕ್ಕ ಇಚ್ಛೆ ಈ ದಿವಸ ನಮಗೆ ಇಲ್ಲ. ಈ ಕೃಷ್ಣಾ ಯೋಜನೆಗೆ ನಾವು ಸಾಕಾದಷ್ಟು ನೆರವನ್ನು ಕೇಂದ್ರ ಸರ್ಕಾರದಲ್ಲಿ ಪಡೆಯಲು ವಿಫಲರಾದರೆ ಅದರ ಸಂಪೂರ್ಣ ಹೊಣೆ ಕಳೆದ ನಾಲ್ಕೂವರೆ ವರ್ಷಗಳಿಂದ ಈ ರಾಜ್ಯದಲ್ಲಿ ರಾಜ್ಯಭಾರ ಮಾಡಿದಂಥ ಮಂತ್ರಿಮಂಡಲದ ನಿಮ್ಮ ನಿಲುವು ಎನ್ನುವುದನ್ನು ಈ ದಿವಸ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ನೀವು ಮುಂದಿನ ಮಹಾ ಚುನಾವಣೆಯಲ್ಲಿ ಜನತೆಯ ಮುಂದೆ ಹೋದಾಗ ಈ ಪ್ರಶ್ನೆ ನಿಮ್ಮ ಮುಂದೆ ಬರುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಉತ್ತರ ಕರ್ನಾಟಕದಲ್ಲಿ ಬರುತ್ತದೆ, ದಕ್ಷಿಣ ಕರ್ನಾಟಕದಲ್ಲಿ ಅದೇ ರೀತಿ ನಮ್ಮ ಕಾವೇರಿ ನದಿ ಯೋಜನೆಗಳ ಬಗ್ಗೆ ಇವೆ. ನಿಮ್ಮನ್ನು ಜನ ಕೇಳುತ್ತಾರೆ ಕಾವೇರಿ ಯೋಜನೆ ಏನು ಮಾಡಿದ್ದೀರಿ, ಒಂದೊಂದು ಯೋಜನೆಗೆ 50-60 ಲಕ್ಷ ರೂಪಾಯಿಗಳನ್ನು ನೀವು ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದೀರಲ್ಲಾ ಅದರಿಂದ ಏನು ಪ್ರತಿಫಲ ಸಿಕ್ಕುತ್ತದೆ ಎಂದು ಪ್ರಶ್ನೆ ಮಾಡಿದಾಗ ಆ ಪ್ರಶ್ನೆಗೂ ಕೂಡ ಉತ್ತರವನ್ನು ತಾವು ಹುಡುಕಿಕೊಳ್ಳಬೇಕಾಗಿದೆ. ಇದೇ ರೀತಿ ಕೃಷ್ಣಾ ಯೋಜನೆ ಬಗ್ಗೆ ಬರತಕ್ಕ ಟೀಕೆಗಳಿಗೆ ನಿಮ್ಮ ಉತ್ತರವನ್ನು ಹುಡುಕಿಕೊಳ್ಳಬೇಕಾಗಿದೆ. ಒಟ್ಟಾರೆ ಹೇಳಬಹುದಾದರೆ ರಾಜ್ಯ ಸರಕಾರ ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ವಿಫಲವಾಗಿದೆ, ಇದಕ್ಕೆ ಕೇಂದ್ರದಿಂದ ನ್ಯಾಯವನ್ನು ನಮ್ಮ ರಾಜ್ಯಕ್ಕೆ ದೊರಕಿಸಿ ಕೊಡುವ ಸಾಮರ್ಥ್ಯವನ್ನು ಕಳೆದುಕೊಂಡಿರುವ ಈ ಸರಕಾರ ಇದನ್ನು ಕೊನೆಯ ಎಚ್ಚರಿಕೆ ಎಂದು ಬೇಕಾದರೂ ತಿಳಿಯಬಹುದು ಅಥವ ಅಂತಿಮ ವಿನಂತಿ ಎಂದು ಬೇಕಾದರೂ ತಿಳಿಯಬಹುದು, ಮುಂದೆ ಬರುವ ಕೆಲವು ತಿಂಗಳಲ್ಲಿ ಈ ಯೋಜನೆಗೆ ನಿರ್ದಿಷ್ಟವಾಗಿ ಕೇಂದ್ರದ ಸಹಾಯಗಳಿಸಲು ಮತ್ತೆ ವಿಫಲರಾದರೆ ಈ ರಾಜ್ಯವನ್ನು ಆಳುವ ಹಕ್ಕನ್ನು ಕಳೆದುಕೊಳ್ಳುತ್ತದೆ ಎಂಬ ಎಚ್ಚರದ ಮಾತನ್ನಾಡಿ ಈ ನಿರ್ಣಯವನ್ನು ಸಮರ್ಥನೆ ಮಾಡುತ್ತೇನೆ.

Mr. SPEAKER.—Before calling upon the next speaker, I would like to know when we shall close this and go to the discussion of the Fourth Five Year Plan, in which many of the Members would like to participate. Shall we debate on the present topic till 5 P.M. or for the rest of the day ? I have no objection to either course.

HON'BLE MEMBERS.—For the rest of the day.

Mr. SPEAKER.—Then, tomorrow, one day will have to suffice for the Fourth Five Year Plan......

SRI S. SIVAPPA.—If we want to discuss the Fourth Five Year Plan, I suggest to the Government that after this Krishna Project discussion, there will be three hours left for discussion on the Fourth Five Year Plan tomorrow. It is better we drop discussion on the Plan and take up the Cauvery Plan. The Fourth Five Year Plan envisages an outlay of 500 crores and it may not be possible to discuss it in three hours. We are not prepared to discuss it in one day *i.e.*, tomorrow. If the Government are so serious, let them convene a special session of the Assembly and sit for three days and discuss the Fourth Five Year Plan. In one day we will not be doing justice to the Fourth Five Year Plan.

MR. SPEAKER.—I have caught the point. I would like to know whether we are sitting in the morning and evening so that more time may be made available. I must issue today the circular relating to the business. Shall we sit in the morning and evening?

HON'BLE MEMBERS.—Yes, Sir.

MR. SPEAKER.—Anyway, I will take it up an hour later. Sri Ganji Veerappa will speak.

† SRI GANJI VEERAPPA (Harihar).—Mr. Speaker, Sir, when I got up in the morning and saw the papers, I was really disappointed to read from the reports, the reported statement of Dr. Asoka, Mehta, the Union Minister for Planning. Perhaps, the reasons for such a view taken by the Union Minister for Planning might be analysed like this. Perhaps it is possible the Union Minister Sri Asoka Mehta was not aware of the statement made by the previous Minister, by the concerned Union Minister Sri K. L. Rao on 6th February 1965 to the effect that the National Development Council had recently approved of a proposal that the Centre should take financial responsibility for at least one major irrigation project in each State. The Planning Commission was considering the question and a final decision would be taken by the Finance Ministry giving their approval. On 6th February 1965 Sri K. L. Rao made the statement, when we all expected the Central Government would take a decision to take up at least one project in our State, namely the Upper Krishna Project by the Centre. Perhaps, it is possible that Sri Asoka Mehta might not be aware of the previous statement of the Union Minister for Irrigation. Secondly, it is also possible that Union Minister, when he made the statement yesterday, was not aware of the full implication of the problem nor of the needs of the State and coupled with the financial position of our State. So, let us not worry ourselves with the statement of the Union Minister made yesterday. If this House and the Government of Mysore are able to convince the Centre that for the following reasons, the case of Mysore for requesting the Centre to assist financially for this project, I am sure, they would be able to appreciate our standpoint and consider our request.

Sir, the State of Mysore, as we know, is deficit in food to the extent of about three lakhs of tons. Perhaps with the increase of

(SRI GANJI VEERAPPA)

population before we complete the Fourth and the Fifth Five Year Plan, when our target with regard to irrigation projects will be reached, I do not know whether the food deficit would double itself from three to six lakhs of tons. Anyway, it is necessary to determine that Upper Krishna Project, the estimate of which at present is only 120 crores for the first and second stage, will be located in the worst part of the State. In fact, we all know that the area where this Upper Krishna is to be located is famine stricken. Very often, the State has to spend lakhs and crores of rupees to relieve the people of the famine conditions.

Sir, the background for our request is two-fold.

[MR. DEPUTY SPEKER in the Chair]

One is, we all know that this august House had on an earlier occasion took a decision to request the Centre to allocate our share of waters in the Krishna, and in this connection, we are grateful to the Gulhatti Commission to have made a fair report, on which the Government of India took a tentative decision. They only said—we permit you to use 600 TMCFT of water from Krishna basin and we will see how best you can utilise this water before the end of 1967. That is the target fixed by the Central Government that the State of Mysore is given an opportunity of using 600 TMCFT of water. It is not the final award of the Centre, because our claim for Krishna Waters is 1250 TMCFT of water. The claim as the House is aware, is based upon certain facts. I would like to place before this House that the optimum cultivable area in Krishna basin is about 233 lakhs of acres and the irrigation potential is 67.5 lakh acres, which requires 1126 TMCFT of water. Our claim for 1126 TMCFT of water from Krishna basin is based upon these facts. Adding industrial use and drinking water supply to the area, our claim has been 1250 TMCFT of water out of which the Government of India has given an opportunity to the State to utilise 600 TMCFT of water. Sir, we know, excluding the Upper Krishna, the projects for which there has been already a commitment from the State, and commencement has been made with regard to various projects, comes to about 350 TMCFT of water. Thus, the remaining quantity of water that will be available before 1976 is 250 TMCFT. As I said out of 600 TMCFT of water commitments have been made and projects taken up for the balance of 350 TMCFT of water. Out of Cauvery we have to remember that the irrigation potential is 3.22 lakh acres, the water requirement is 183 TMCFT. We have already made commitment for 103 TMCFT of water and the balance of 80 TMCFT of water has to be utilised before 1974. According to the Inter-State agreement it has to be reviewed.

SRI K. S. SURYANARAYANA RAO.—What are the projects committed to and stated under Cauvery Water Scheme ?

SRI GANJI VEERAPPA.—When that subject comes up tomorrow I will say. Why I am suggesting all this is to impress upon the House the need to ask the Centre to take up Upper Krishna project entirely. Otherwise our resources are not enough. With that end in view I am saying that we have to utilise 250 TMCFT of water in Upper Krishna and 80 TMCFT in Cauvery. Under Cauvery the target is 1974 and under the Inter-State agreement it will have to be reviewed thereafter. Under Krishna we have to utilise 250 TMCFT of water the target fixed by the Centre—by 1976. So, the calculations come to this. Before 1974 and 1976 respectively, the State will have to find resources to utilise 330 TMCFT of water. The cost as worked out for each TMCFT of water would be Rs. 50 lakhs at present and looking at the trend of increase we can take as 75 lakhs per each TMCFT and the amount required would be 325 crores. So, if we have to take up these works and complete before the end of 1976 then a sum of Rs. 325 crores would be required and that too within 10 years. What are our resources? We have to analyse this and place before the Centre so that the Centre may appreciate our point of view. Otherwise the consequences will be serious. If really by the end of 1976 the State is unable to utilise 330 T.M. CFT. of water they would say, "you claimed 1250 T.M. CFT. and we have permitted 600 T.M. CFT. before 1976 and you have not been able to make use of it, and how are you entitled for the remaining". This is a serious situation which we have to take into consideration and the Government has to seriously fight. Unfortunately the attitude of the Centre towards the State is not helpful. I am sorry to make this comment. Though the Gulhati Commission made a fair recommendation upholding the case of Mysore, the Government as an interim measure said that if we have to claim for more than 600 T.M. CFT. of water, our performance till 1976 must be good and convincing. That is why the State has to find resources. If we calculate the cost of these works we have to find out 325 crores before 1976 both under Cauvery and Krishna. What is the provision made now? What is the amount that we have been spending so far? That is the second aspect that the State has to impress upon the Centre. We all know that so far the amounts spent during the first, second and third plan would be like this: during the first plan I think we have spent about 37 crores; during the second plan we have spent 29 crores and for the third plan we have spent about 30 crores. For all the 15 years if we calculate the figures we have spent only Rs. 96 crores and it works to about roughly five or six crores a year. If within the next ten years we have to spend 325 crores plus carrying out the spill over works to the tune of 150 crores, unless the State finds resources every year to spend 30 crores for major and medium irrigation projects we will not be able to give good performance, namely, to utilise all the water permitted to us. That is why we have to impress upon the Centre. Even during the Fourth Plan, I am told, the provision is only for 80 crores when we require 330 crores.

(SRI GANJI VEERAPPA)

Coming to the irrigation potential, as my friend Sri Patil put it the all-India target is 24 per cent. In our State the progress is, prior to independence *i.e.*, 1947 the irrigation percentage was only 5 per cent. During the first plan with an expenditure of 37 crores it rose to 7·9 per cent, during the second plan it rose to 8·9 per cent and at the end of the third plan it has gone to 11·9 per cent. So, let alone reaching the all-India average of 25 per cent, we have not been able even to go above 50 per cent of the all-India achievement. If we have to reach the all-India level of 24 per cent, we have to exhaust all our resources. I am told that the Government has prepared projects for even the remaining 650 T.M. CFT. of water and so let not the Centre go with the impression that we can satisfy with 600 T.M. CFT. of water. Plans and estimates are ready even to spend 650 T.M. CFT. of water from Upper Krishna. So, now we have to tell the Centre that looking at the resources of the State, it is not possible for the State to undertake this project and further this cannot viewed as a State project. It is of national importance because it is to relieve the country from famine and daught and the responsibility of the Centre is heavy. In these days when food production should be more and more, unless some of the major and medium irrigation are taken up there is no other way of solving the food problem.

4-30 P.M.

These figures of achievemrnt of irrigation potential in the State during the three Plans come up from 5 to 11 per cent. It is but fair for us to reach the All India target. So, it will be necessary to impress upon the Centre that they have to take up the entire project and assist us. My friend, Sri M. R. Patil gave figures with regard to the neighbouring States. We are not envious of them, but from the figures that are given for Chambal Project, Bhakra-Nangal Project and Nagarjunasagar Project, it is clear that crores of rupees have been given by the Centre to other States. In fact, specially when the case of Andhra, which has got an irrigation potential ef 28 to 30 per cent, has impressed the Centre and they are persuaded to give Rs. 68 crores for Nagarjunasagar, our case is much stronger because our State has got an irrigation potential of 9 per cent as against 30 per cent in Andhra. Is it not convincing for the Centre that we have got a better case and we deserve more assistance ? When the Centre has given assistance to all the other States, why not they view Mysore also similarly if not on a better consideration ? So, we have to tell them that our case deserves better consideration. The facts and figures given show that our Government have done their best.

Sri K. S. SURYANARAYANA RAO.—Convincing answers are not coming from the Government of India.

SRI GANJI VEERAPPA.—There may be sufficient reasons for that. Perhaps the Centre has not yet realised to give all this assistance to us; perhaps we have not yet succeeded in convincing them. Let us make an endeavour now. I am glad this House is one and with one voice, irrespective of parties, we have been making a request to the Government of India. If only we look to the progress and the achievements made so far—may be in this matter we have not yet achieved our results—our Leader has been able to impress upon the Centre that our achievements are many. Let us not mix up this issue, because the Centre has not given the expected aid for progressing. It does not mean that in all other spheres Mysore has not yet been able to impress the Centre. In fact, the recent Finance Commission Report is an evidence that they have rightly viewed and have given us munificient amounts to make up the gaps. The case of Mysore is a bit peculiar with regard to the irrigation potentialities. We have to impress upon the Centre. Unfortunately in Mysore the projects have to be made not in a plain land, but on terrines and valleys. So the cost of construction of projects in Mysore as compared to the cost elsewhere, in Punjab, Madras and Andhra, has been more. In fact, our cost has been Rs.1,000 to 1,500, whereas in Bhakra Nangal it is Rs. 300 to Rs. 400 and in Andhra and Madras the cost has been between Rs. 300 to Rs. 400 per acre, not more than Rs. 450 anyway. Unfortunately, in Mysore, due to existence of terraines and valleys, the cost per acre is twice or thrice more than what is prevailing in the rest of India. So, we have to convince the Centre with regard to these aspects and try to get the maximum help.

I want to suggest one more thing. If we look at the expenditure incurred by the neighbouring States of Maharashtra and Andhra during the Third Plan for irrigation, it is clear that the neighbouring States have spent twice or thrice of what we have done: Maharashtra has spent Rs. 66 crores, and Andhra Rs. 90 crores, whereas our performance is not even half, the only reason being lack of resources in our State. Our resources must improve. The taxation here, as my friend Sri M. R. Patil put it, has reached the maximum. We cannot find further resources by levying further taxes. The Centre must realise that our resources cannot be improved by additional taxation, and therefore it is very necessary that they have to take up this project and finance us for all the three stages. Let them make a commencement by financing at least for the first stage. As I said earlier, it is not a State problem; it is a national problem.

I wholeheartedly support the Resolution moved by my hon'ble friend, Sri M. R. Patil.

†SRI ANNA RAO GANAMUKHI (Afzalpur).—Sir, I have heard with great attention the speech made by my friend, Sri Ganji Veerappa. The Resolution is a self-evident one, but its implications seem to be far-reaching. I think, the Centre may not take over this Project- I may not be understood that I am against it,- There are certain implications and

(SRI ANNA RAO GANAMUKHI)

the Centre will not take the responsibility of taking those implications for granted, because the water dispute is pending before the Government of India. It is hanging fire since 1962. They have neither referred the dispute to the arbitration as envisaged under the Water Dispute Act, not they have given any definite decision as to the rightful share the Mysore State should have in the Krishna waters. That is exactly the reason why they are shirking the responsibility of saying anything definite about this. Taking into consideration the works already undertaken, and the works on hand, we have already expressed our views during the Budget discussion and also on previous occasions that only 110 Tmcft., of water remains as our share out of 600 Tmcft., that has been allotted to us by the Gulhati Commission.

Sri Ganji Veerappa was saying that the Gulhati Commission had made a fair recommendation. Shall I say that it was the technical committee which generally makes any recommendation or any fair or unfair assessment ? It only technically assessed the water source and the availability of it to the extent possible and the technical feasibility. That was the only view that the Gulhati Commission took. From what they said, it is clear that after meeting the various commitments, we can get 110 T. M. C. ft. water from the Krishna. At the first stage itself 110 T. M. C. ft. of water is required. When this is the state of affairs, the Centre cannot obviously take over this project to be constructed as a Central project. We have to distinguish between assistance to be sought by the State Government for constructing this project and to hand it over to the Centre. There are two things; one is, to ask adequate or abundant assistance because we cannot construct this project on our own. The other alternative is, to entrust the whole responsibility to the Centre so that they may construct the project during all the six stages. But the Government of India knows the allocation of the water is not sufficient to meet all the states. Therefore, I do not think, they will take that responsibility. For industries and for drinking water purposes we require 50 T.M.C. ft. We have already undertaken some industries and what an amount of water that is required for other industries we know. So; we cannot allow this water for irrigation unless the industries' requirement is met as well as for drinking water purpose. After Malaprabha, Ghataprabha, II stage of T. B. high level canal—all these commitments are already there and when all these commitments are met, then only, water that is left is 110 T.M.C ft. Let not my friends have the wishful idea that we will have plenty of water. Let me remind this House that if the link canals which have been suggested by Gulhati Commission to divert the Godavari water through the Krishna Valley is carried out by the Andhra Government, then, there is the possibility of having some extra water for us. They have suggested it. But, the Gulhati Commission said, immediately after the submission of their report that the Central Government should

set up a Technical Committee and assess the feasibility of diverting the Godavari water to Krishna. They have not taken any step. What has our Government done in this regard, I want to know. Has our Government taken any step to divert the water? It is already two years. Within six months, they said, this report must be there and announce whether the diversion of Godavari water is feasible or not. I do not know whether the Technical Committee was set up by the Centre or not. Our Government has become very weak in this matter. It has not asserted itself; it has not taken any practical step. Sir, this is not a problem of the opposition or the Government. This is a problem of the Mysore State. In our State the per centage of irrigation is only 8. We have frequent famines. In spite of all this, our Government does not want to secure our rightful share. We must try to get our rightful share and ask the Centre to give finances. I think, our Government have failed to assert themselves. If, without Godavari water, Nagarjunasagar is constructed, then, they will have the riparian rights and we will be deprived of whatever right we have got. We have not only ignored but slept over the problem. You may say that Government of India will give a favourable decision. If you are so confident about this, then, you need not have brought this resolution. Because you are defident of the Central support, you want the support of this House for your proceeding further. You have become very weak that you want a resolution to be passed by this House. Previously also we have passed a resolution but what have you done? We know that our finances are limited. But, we have mis-managed all the Projects. The working capital, the interest—everything has gone. We are getting no return. On some of the projects, the Finance Department has prepared the figures. There, we find that we are getting not even the interest on the working capital. Therefore I would urge that our rightful share must be obtained. It is not up to the Centre to say that after 1976 we will have no right to utilize the water. If we are financially weak; let them give us adequate finance and then we will utilize the water before then. Otherwise, we should have the right to utilize our share of the water even in the 6th or 7th plan and they should not press to utilize it immediately.

In conclusion, I would say in unequivocal terms that our Government have failed in securing our rightful share as also financial assistance to the required extent. The whole financial discipline has disappeared from Government and consequently they have squandered moneys wastefully and there is no return on the investments made. They have not undertaken any large scale project and they are overdrawing moneys from the Reserve Bank and not spending them on any project. I would further add that along with this question the State Government should also take up the question of diversion of Godavari water to Krishna because if the water is not diverted I think they will have a great potential for Irrigation in the Nagarjunasagar dam and the whole water which is meant for us will be going to them as a result of which we will suffer. Moreover, the water dispute is not referred to any

(SRI ANNA RAO GANAMUKHI)

Board for arbitration by the Government of India. They are sitting tight on this dispute and so I do not think we are going to get any justice.

Our Government should see that we get our rightful share of water, adequate financial assistance from the Centre as envisaged by this resolution.

Sri R. S. HEGDE (Honnawar).—Sir, I support this resolution. This resolution, in my submission, is the most opportune and in the interest of the promotion of agricultural development and consequent food production. It is said we are a marginally deficit State to the tune of 3 lakhs tons in a normal year. This marginal deficit has to be successfully tackled. The State depending upon the Centre and the Centre depending upon foreign countries for supply of food will result in economic mismanagement for the states as well as the Centre. The deficit has to be made good by increasing irrigation potential, by intensive and extensive cultivation. The Government have been trying their best and will leave no stone unturned to make the state not only self-sufficient in food but also surplus in due course of time.

At the present 2 per cent increase in the population of the State every year we will be 3 crores of people in 1976 and so the requirement of the State will increase from 48 lakhs tons to 57 lakhs tons. Hence the Government have to evolve a method by which we become self-sufficient. It is said that the present irrigation potential in the State is 8½ per cent and if the Krishna Valley and Cauvery Valley projects are executed it will increase to 11.9 per cent. During the pre-plan era the irrigation potential was 5 per cent and during the first three plans it increased by 3½ per cent taking the total to 8½ per cent. That compares very favourably with Maharashtra where it is only 6 per cent, but it falls short of the Southern Zonal States like Madras and Andhra where it is 40 per cent and 28 per cent respectively. Our State also falls short of the All India average where it is 24 per cent. At the outset it must be appreciated and there were certain intrinsic difficulties with regard to increasing the irrigation potential :

1. The integrated areas namely Bombay and Hyderabad Karnatak were starving in irrigation facilities and these backward areas posed a problem to the Government.

2. The cost of providing irrigation facilities through major and medium irrigation works has been substantially more. According to the 1962 statistics it is stated that the cost is Rs. 946 per acre, we are only second to Maharashtra where it is Rs. 1132. In Andhra it is Rs. 697 and Madras Rs. 849. In Punjab it is Rs. 288. The average cost in India is about Rs. 500. Our recent experience has shown that the cost has gone up still further from Rs. 1300 to Rs. 1700 per acre and this has regarded the progress of irrigation.

3. The third reason is the slender finances of the State despite the best efforts of Government which should have attracted the attention of the centre.

4. The next difficulty is lack of Central assistance for financing the projects of the State.

We have the best engineering skill in our State of which we are very proud. We have got the technical personnel to exploit the irrigation potential to the full. If they are asked to march ahead, they will do so in no time. The difficulty is that the Centre has said that all these big projects must be completed within 10 years and if they are not completed within that time, the State will land itself in an embarrasing position. I would submit that the Centre should realise that Maharashtra and Andhra have vast irrigation complex and they have so many works and it is likely that their consumption of water may be very much and very disproportionate to their share of water so much so that we may be left with very meagre resources. Besides the State's share of Cauvery water is to be used by 1974. We are fully conscious of this fact. Our Government have been making repeated representation to the Centre for financing the Upper Krishna Project.

5-00 P.M.

So, the question is whether there is a case for the State in favour of the Centre financing the Upper Krishna Project, whether in doing so, the Centre is going out of the way and whether the Centre in doing so is not narrowing the regional imbalance that has been existing in the Southern States. As I stated before, during the Third Plan period Government has spent Rs. 96 crores as against an estimated cost of Rs. 247 crores. After spending Rs. 96 crores, Government will require Rs. 150 crores for the committed works. In addition, in the Fourth Plan they will require Rs. 120 crores for undertaking the Upper Krishna Project. So, Government will be requiring Rs. 272 crores to complete the Upper Krishna Project and the Cauvery Valley Projects. If the Centre finances the Upper Krishna Project, then, the Government would be able to find out sufficient financial resources and within 10 years all the Krishna Valley Projects and the Cauvery Valley Projects excluding the Upper Krishna Projects can be completed. So, financing the Upper Krishna Project is not something unprecedented or is not something which is against the policy of the Centre. They have been financing many of the schemes. After all, what is Nagarjunasagar ? It is only Lower Krishna Project When the centre has been financing the Nagarjunasagar Project in Andhra Pradesh, there is no reason why they should not come forward and help us also. Therefore, I support the resolution.

SRI G. V. GOWDA (Palya).—Sir, we want to criticise the Government for its past deeds.

MR. SPEAKER.—If ultimately the member is going to support it, I do not understand why we should spend time in speeches especially when we are hardpressed for it. If a member wants to criticise Government, he can do so when the Fourth Plan comes up for discussion.

†ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಸ್ವಾಮೀ, ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮಾನ್ ಎಂ. ಆರ್. ಪಾಟೀಲರವರು ತಂದಿರತಕ್ಕ ನಿರ್ಣಯದ ಮೇಲೆ ಸಾಕಷ್ಟು ಜನ ಮಾತನಾಡಿದ್ದಾರೆ. ಇದು ಬಹಳ ಮಹತ್ವವಾದ ವಿಚಾರ. ದೇಶದ ದೃಷ್ಟಿಯಿಂದ ಮತ್ತು ನಮ್ಮ ರಾಜ್ಯದ ದೃಷ್ಟಿಯಿಂದ ಇದು ಬಹಳ ಮುಖ್ಯವಾದ ವಿಷಯ. ಈ ವಿಷಯದ ಮೇಲೆ ರಾಜ್ಯ ಸರಕಾರದವರು ಮೇಲಿಂದ ಮೇಲೆ ಕೃಷ್ಣಾ ಬೇಸಿನ್‌ನ್ನು ಉತ್ತಮಪಡಿಸಬೇಕೆಂದು ಮತ್ತು ಈ ಪ್ರದೇಶದಲ್ಲಿ ನೀರಾವರಿಯನ್ನು ಅಭಿವೃದ್ಧಿ ಮಾಡಬೇಕೆಂದು ಪ್ರಯತ್ನ ನಡೆಸುತ್ತಿದ್ದಾರೆ. ನಮ್ಮ ಭಾರತ ದೇಶದಲ್ಲಿ ಇತರ ನೀರಾವರಿ ಯೋಜನೆಗಳು ಹೇಗೆ ಪ್ರಧಾನವಾಗಿವೆಯೋ ಅದೇ ರೀತಿ ನಮ್ಮ ದೇಶಕ್ಕೆ ಕೃಷ್ಣಾನದಿಯ ಪ್ರಾಜೆಕ್ಟು ಬಹಳ ಅವಶ್ಯವಾದುದು ಎಂದು ನಾನು ಇಲ್ಲಿ ಮತ್ತೆ ಹೇಳಬೇಕಾಗಿಲ್ಲ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಮೈಸೂರು ದೇಶದಲ್ಲಿ ಇರಿಗೇಷನ್ನು ಪರ್‌ಸೆಂಟೇಜು ಉಳಿದ ರಾಜ್ಯಗಳಿಗಿಂತ ಕಡಿಮೆ ಎಂದು ಕೇಂದ್ರ ಸರಕಾರದವರೂ ಹೇಳಿದ್ದಾರೆ. ಇಲ್ಲಿಯವರೆಗೆ ಕೇಂದ್ರದವರು ಈ ಕೃಷ್ಣಾ ಯೋಜನೆಯನ್ನು ತಾವೇ ಕೈಗೊಳ್ಳದೇ ಇರುವುದು ಬಹಳ ವಿಷಾದಕರವಾಗಿದೆ. ಕೇಂದ್ರ ಸರಕಾರದವರು ತಾವಾಗಿಯೇ ಮುಂದೆ ಬಂದು ಇದೂ ಒಂದು ನ್ಯಾಷನಲ್ ಪ್ರಾಜೆಕ್ಟು ಮತ್ತು ನಮ್ಮ ದೇಶದಲ್ಲಿ ಇಂತಹ ಒಂದು ಪ್ರಾಜೆಕ್ಟು ಆಗದೇ ಇರುವುದರಿಂದಾಗಿ ಆಹಾರದ ಅಭಾವವುಂಟಾಗಿದೆ. ಈ ಅಭಾವವನ್ನು ಎದುರಿಸುವುದಕ್ಕಾಗಿ ಇಂತಹ ಪ್ರಾಜೆಕ್ಟುಗಳನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಮಾಡಲು ಅವರೇ ಮುಂದೆ ಬಂದು ಇಂತಹ ಒಂದು ಒಳ್ಳೆಯ ಕಾರ್ಯವನ್ನು ಮಾಡಬೇಕಾಗಿತ್ತು. ಆದರೆ ಇವೊತ್ತಿನ ದಿವಸ ಕೇಂದ್ರದವರ ಮುಂದೆ ನಮ್ಮ ದೇಶದ ಸರಕಾರದವರು ಈ ಯೋಜನೆಯನ್ನು ಇಟ್ಟಿದ್ದರೂ ಇದನ್ನು ಯಾವ ಪ್ರಕಾರವಾಗಿ ನೋಡುತ್ತಾರೆ ಎಂದು ಬೇರೆ ಹೇಳಬೇಕಾಗಿಲ್ಲ. ಈಗಾಗಲೇ ನಮ್ಮ ಇಂಡಿಯಾ ದೇಶದಲ್ಲಿರುವ ರಾಜಸ್ಥಾನ ಬರಗಾಲಕ್ಕೆ ಸಿಕ್ಕಿರುವ ಪ್ರದೇಶ ಎಂದು ಅವರೇ ತಿಳಿದು ಮುಂದಾಗಿ ಬಂದು ಅಲ್ಲಿಗೆ ಬಾಕ್ರಾ ಹಾಗೂ ನಂಗಲ್ ಯೋಜನಾಗಳನ್ನು ಮಾಡಲು ಅವರೇ ವಹಿಸಿಕೊಂಡು ಮಾಡಿಕೊಟ್ಟರು. ಅದೇ ರೀತಿ ಆಂಧ್ರದಲ್ಲಿ ನಾಗಾರ್ಜುನಸಾಗರ ಮಾಡಲು ಸಹಾಯ ಮಾಡಿದ್ದಾರೆ. ಅದರಂತೆ ದಾಮೋದರ್ ಯೋಜನೆಯನ್ನು ಕೂಡ ಮಾಡಲು ಸಹಾಯ ಮಾಡಿದ್ದಾರೆ. ಮೈಸೂರು ಸರಕಾರಕ್ಕೆ ಬೇಕಾದ ಈ ಯೋಜನೆಗೂ ಕೂಡ ಕೇಂದ್ರದವರು ಸಹಾಯ ಸೌಕರ್ಯಗಳನ್ನೂ ಅದರಂತೆ ಒದಗಿಸಿಕೊಡಬೇಕಾಗಿತ್ತು. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮಾನ್ ಅಣ್ಣಾರಾವ್ ಗಣಮುಖಿಯವರು ಹೇಳಿದಂತೆ ನಮಗೆ ಕೃಷ್ಣಾನದಿಯಲ್ಲಿ ದೊರಕುವ ನೀರಿನ ಪ್ರಮಾಣ ಕೇವಲ 600 ಟಿ.ಎಂ.ಸಿ.ಯಷ್ಟು ಇನ್ನೂ ಹೆಚ್ಚು ನೀರು ನಮಗೆ ಬರಬೇಕು ಮತ್ತು ಅದನ್ನು ತೆಗೆದುಕೊಳ್ಳಲು ವಿಚಾರ ವಿನಿಮಯಗಳಾಗುತ್ತಿವೆ. ಈಗ ಕೊಟ್ಟಿರತಕ್ಕ 600 ಟಿ.ಎಂ.ಸಿ.ಯಷ್ಟು ನೀರನ್ನುಪಯೋಗಿಸಿಕೊಳ್ಳಲು ನಮ್ಮಲ್ಲಿ ಹಣವಿಲ್ಲ ಮತ್ತು ಇನ್ನು ಹೆಚ್ಚು ನೀರನ್ನು ಉಪಯೋಗಿಸಿಕೊಳ್ಳಬೇಕಾದರೆ ನಾವು ಇದಕ್ಕಾಗಿ ರಿಸೋರ್ಸಸ್‌ಗಳನ್ನು ಹೆಚ್ಚು ಮಾಡಿಕೊಳ್ಳಬೇಕು ಇದರ ಸಲುವಾಗಿ ರಾಜ್ಯ ಸರ್ಕಾರದವರು ಹೆಚ್ಚು ಹಣವನ್ನು ತೆಗೆದಿಡಬೇಕಾಗಿದೆ. ಈಗಾಗಲೇ ನಮ್ಮ ರಾಜ್ಯ ಸರಕಾರದವರು ಮುಗಿಸಬೇಕಾಗಿರುವ ಅನೇಕ ಸಣ್ಣ ನೀರಾವರಿ ಯೋಜನೆಗಳು ಕೂಡ ಮುಗಿಯದೆ ಹಾಗೆಯೇ ಇವೆ. ಇದರಿಂದ ಕೃಷ್ಣಾ ನೀರಿನ ಉಪಯೋಗವನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಕೃಷ್ಣಾರವರು ಇಲ್ಲಿ ಹೇಳಿದರು. ಸರಕಾರ ಇದಕ್ಕೆ ಹೆಚ್ಚು ರೊಕ್ಕ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಆದರೆ ಕೇಂದ್ರದವರು ಬಾಕ್ರಾ ಹಾಗೂ ನಂಗಲ್ ಯೋಜನೆಗಳನ್ನು ಮಾಡಲು ಹೇಗೆ ಸಹಾಯ ಮಾಡಿದರೋ ಅದರಂತೆಯೇ ನಮ್ಮ ರಾಜ್ಯದಲ್ಲೂ ಇಂತಹ ಒಂದು ದೊಡ್ಡ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಮಾಡಲು ಸಹಾಯ ಮಾಡಬೇಕೆಂದು ನಾವು ಇಲ್ಲಿ ಒತ್ತಾಯ ತರಬೇಕಾಗಿದೆ. ಇದನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ನಮ್ಮಲ್ಲಿ ಕೇಂದ್ರದವರು ಹೆಚ್ಚು ನೀರಾವರಿ ಕಾರ್ಯಗಳಿಗಾಗಿ ಕೊಟ್ಟಿಲ್ಲದೆ ಇರುವುದರಿಂದ ಈ ಕೃಷ್ಣಾ ಯೋಜನೆಗೆ ಅವರು ಸಹಾಯ ಮಾಡುತ್ತಾರೆ, ಇದರಲ್ಲಿ ಸಂಶಯವಿಲ್ಲ. ಕೇಂದ್ರ ಸರಕಾರದವರ ಗಮನಕ್ಕೆ ಒತ್ತಾಯದಿಂದ ನಾವು ಪದೇ ಪದೇ ಹೇಳುತ್ತಿರುವುದರಿಂದ ಅವರು ಇದನ್ನು ಮಾಡುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಕೇಂದ್ರ ಸರಕಾರದವರು ಇದನ್ನೂ ಕೂಡ ಒಂದು ನ್ಯಾಷನಲ್ ಪ್ರಾಜೆಕ್ಟ್ ಎಂದು ಗಮನಕ್ಕೆ ತೆಗೆದುಕೊಂಡು ಹೆಚ್ಚಿನ ಸಹಾಯ ಮಾಡಲೇಬೇಕು. ಮಾನ್ಯ ಸದಸ್ಯರೆಲ್ಲರೂ ಇಲ್ಲಿ ತಂದಿರುವ ಈ ಗೊತ್ತುವಳಿಯನ್ನು ಒಮ್ಮತದಿಂದ ಒಪ್ಪಬೇಕು ಎಂದು ನಾನು ಕೇಳಿಕೊಂಡು ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—If any member is desirous of opposing it, then.. ...

Sri G. V. GOWDA.—It will not be downright opposition.

Mr. SPEAKER.—If it is merely an expression of views, it can be done on another occasion. No member should think that he should be given a chance to speak on every topic.

ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಸ್ವಾಮಿ, ನಮ್ಮ ಮುಂದೆ ಇಟ್ಟಿರುವ ಈ ನಿರ್ಣಯ ಬಹಳ ಹಿಂದೆಯೆ ಬರಬೇಕಾಗಿತ್ತು. ನಮ್ಮ ಮುಖ್ಯ ಮಂತ್ರಿಗಳು ದೊಡ್ಡ ನೀರಾವರಿ ಯೋಜನೆಗಳ ವಿಷಯದಲ್ಲಿ ಹಿಂದೆ ಇದೇ ಸಭೆಯಲ್ಲಿ ಅನೇಕ ಸಂದರ್ಭಗಳು ಬಂದಿದ್ದಾಗ ಅವರು 'ಈ ವಿಷಯವನ್ನೆಲ್ಲಾ ನಮಗೇ ಬಿಟ್ಟು ಬಿಡಿ, ನಾನು ಮಾಡಿಕೊಡುತ್ತೇನೆ, ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗಬೇಡಿ' ಎಂದು ಈ ದೇಶದಲ್ಲಿ ಸುಮಾರು ನಾಲ್ಕೈವರೆ ವರ್ಷಗಳಿಂದಲೂ ಹೇಳುತ್ತಾ ನಮ್ಮನ್ನು ಒಂದು ರೀತಿಯಾದ ಅಂಧಕಾರದಲ್ಲಿ ಇಟ್ಟರು. ಕೇಂದ್ರ ಸರಕಾರದಲ್ಲ ನಮ್ಮ ಪ್ರಭಾವ ಬಹಳ ಕಡಿಮೆ ಇದೆ. ನೀವು ಆದಷ್ಟೂ ಬಲವಾದ ಒತ್ತಾಯ ಹಾಕಿ ನಮಗೆ ಸಲ್ಲ ಬೇಕಾದ ಹಣವನ್ನು ತೆಗೆದುಕೊಂಡು ಆದಷ್ಟು ಜಾಗ್ರತೆ ನೀರಾವರಿ ಯೋಜನೆಗಳನ್ನು ಕೈಗೊಳ್ಳ ಬೇಕು ಎಂದು ಇಲ್ಲಿ ನೆರದಿರುವ ಎಲ್ಲ ಸದಸ್ಯರೂ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದರೂ ಕೂಡ ನಮ್ಮ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಕೊಟ್ಟಂತಹ ಭರವಸೆಯಂತೆ ಇದನ್ನು ಕಾರ್ಯಗತ ಮಾಡುವುದರಲ್ಲಿ ವಿಫಲರಾಗಿದ್ದಾರೆ. ಇದಕ್ಕೆ ಕಾರಣ ಹಿಂದೆ ಕೇಂದ್ರ ಸರಕಾರದವರು ಕೊಟ್ಟಂತಹ ಹಣವನ್ನೆಲ್ಲಾ ಶರಾವತಿ ಹಾಗೂ ಇನ್ನೂ ಅನೇಕ ದೊಡ್ಡ ದೊಡ್ಡ ಯೋಜನೆಗಳಿಗಾಗಿ ಖರ್ಚು ಮಾಡಿರುವುದರಿಂದ ಇದಕ್ಕೆ ಈಗ ಕೇಂದ್ರ ಸರಕಾರದವರು ಸಾಕಷ್ಟು ಮನ್ನಣೆ ಕೊಟ್ಟಿಲ್ಲ ಎಂದು ಕಾಣುತ್ತದೆ. ಆದರೆ ಈಗಲೂ ಕೂಡ ನಮ್ಮ ದೃಷ್ಟಿಯಲ್ಲಿ ಮತ್ತು ಕೇಂದ್ರ ಸರಕಾರದ ದೃಷ್ಟಿಯಲ್ಲಿ ದೇಶದಲ್ಲಿರುವ ಆಹಾರ ಸಮಸ್ಯೆಯನ್ನು ನೀಗಬೇಕಾಗಿದೆ. ಇದಕ್ಕಾಗಿ ಇಂತಹ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಾರ್ಯಗತ ಮಾಡಿ ಆದಷ್ಟು ಜಾಗ್ರತೆಯಾಗಿ ನಮ್ಮ ಆಹಾರ ಸಮಸ್ಯೆಯನ್ನು ಪೂರೈಸಿಕೊಳ್ಳಬೇಕಾದರೆ ಕೇಂದ್ರ ಸರಕಾರ ತಕ್ಷಣ ನಮಗೆ ನೆರವು ಕೊಟ್ಟು ಸಹಾಯ ಮಾಡಬೇಕು ಮತ್ತು ಈ ಕೃಷ್ಣಾ ಪ್ರಾಜೆಕ್ಟಿಗೆ ಬೇಕಾಗಿರುವ ಪೂರ್ಣ ಹಣವನ್ನು ಅವರೇ ಕೊಡಬೇಕು. ಇದಕ್ಕಾಗಿ ನಾವು ಈ ಸಭೆಯ ಮೂಲಕ ಕೇಂದ್ರವನ್ನೂ ಪ್ರಾರ್ಥಿಸಿಕೊಳ್ಳಬೇಕೆಂದೂ ಹೇಳುತ್ತೇನೆ.

ಕೇಂದ್ರ ಸರ್ಕಾರದವರು, ಸಂಸ್ಥಾನ ಸರ್ಕಾರದವರು ತಮಗೆ ಬೇಕಾದಂಥ ರಿಸೋರ್ಸಸ್ ಹೆಚ್ಚಾಗಿ ಮಾಡಿಕೊಳ್ಳಬೇಕೆಂದು ಅವರು ಹೇಳುವುದು, ನಾವು ಹಾಕುವ ತೆರಿಗೆಯನ್ನು ಹಾಕಿದ್ದೇವೆ ಎಂದು ನಮ್ಮ ಸರ್ಕಾರದವರು ಹೇಳುವುದು ಈ ಮಧ್ಯೆ ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡ ವಾಯಿತು ಎನ್ನುವಂತೆ ಸಾಮಾನ್ಯ ಜನ ಇದರಿಂದ ತೊಂದರೆ ಬೀಳುತ್ತಿದ್ದಾರೆ. ತೆರಿಗೆಯನ್ನು ಹಾಕುವಾಗ ಕೂಡ ಸಾಮಾನ್ಯ ಜನರ ಮೇಲೆ ಬೀಳದ ಹಾಗೆ, ಎಲ್ಲಿ ಅಭಿವೃದ್ಧಿ ಆಗಿವೆಯೋ, ಯಾರು ಕೊಡಬಲ್ಲಲೋ ಅಂಥ ಕಡೆ ಮಾತ್ರ ತೆರಿಗೆಯನ್ನು ಹಾಕಿ ರಿಸೋರ್ಸಸ್ ಅಭಿವೃದ್ಧಿ ಮಾಡಿಕೊಳ್ಳಲು ಸರ್ಕಾರ ಪ್ರಯತ್ನ ಮಾಡಬೇಕು. ಕೇಂದ್ರದವರಿಗೆ ಈಗಿರತಕ್ಕ ಅಧಿಕಾರವರ್ಗದಿಂದ ಇದರ ಕಾರ್ಯ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಅನುಮಾನವಿದೆ. ಈ ಸರ್ಕಾರವೂ ಕೂಡ ಒಂದೇ ಪಕ್ಷಕ್ಕೆ ಸೇರಿದ್ದು, ಕೇಂದ್ರ ಸರ್ಕಾರವೂ ಅದೇ ಪಕ್ಷಕ್ಕೆ ಸೇರಿದ್ದು, ಇವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಇದುವರೆಗೂ ತೆಗೆದುಕೊಂಡಿಲ್ಲ. ಆದುದರಿಂದ ಮುಂದೆ ಆದನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು ಈ ಪ್ರಾಜೆಕ್ಟನ್ನು ಆದಷ್ಟು ಜಾಗ್ರತೆ ಪೂರೈಸಿಕೊಡುವುದಕ್ಕೆ ಕೇಂದ್ರ ಸರ್ಕಾರ ಮುಂದೆ ಬರುತ್ತದೆ ಎಂದು ನಾನು ನಂಬಿದ್ದೇನೆ.

MR. SPEAKER.—Some members are blaming me that they are not given chance. It has to be closed at 5 P.M. It is already 5-15 P.M. Members will simply get up and disturb.

SRI K. S. SURYANARAYANA RAO.—We do not blame the Speaker. What I request is that I may be allowed to Speak. I won't unnecessarily get up and disturb. I want to speak some thing specific.

MR. SPEAKER.—Is the Member supporting or opposing ?

SRI K. S. SURYANARAYANA RAO.—I am opposing and I will give reasons for that.

MR. SPEAKER.—I do not want any reasons. I cannot go on asking every member to give reasons. These are all mere recommendations to the Central Government which the Member wants to oppose.

SRI K. S. SURYANARAYANA RAO.—If the Chair allows me I will explain why I am opposing.

Mr. SPEAKER.—The leader of the Opposition is heard. Many members have participated. It was aggreed that it should be closed at 5 P.M. and it is already 5-15 P.M. I will stick to the time allotted and I cannot allow any body to speak.

† ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಇರುವ ಈ ಠರಾವನ್ನು ಇವತ್ತು ಮಾತನಾಡಿದಂಥ ಎಲ್ಲ ಮಾನ್ಯ ಸದಸ್ಯರೂ ಅನುಮೋದಿಸಿದ್ದಾರೆ. ಬಹುಶಃ ಸರ್ವಾನುಮತದಿಂದ ಈ ಒಂದು ನಿರ್ಣಯವನ್ನು ಅಂಗೀಕರಿಸುವಂಥ ಒಂದು ವಾತಾವರಣವನ್ನು ಈ ಸಭೆಯಲ್ಲಿ ನಾನು ಕಾಣುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಎಂ. ಆರ್. ಪಾಟೀಲರು ಈ ಒಂದು ಠರಾವನ್ನು ತಂದು ಉಪಕಾರ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಠರಾವು ಮೂಲಕ ಮಾನ್ಯ ಸದಸ್ಯರ ಗಮನ ನಮ್ಮ ಸಂಸ್ಥಾನದ ನೀರಾವರಿ ಸಮಸ್ಯೆ ಎಷ್ಟು ಗಹನವಾಗಿದೆ ಮತ್ತು ಅದರ ಬಗ್ಗೆ ನಾವು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವಂಥ ವಿಚಾರವನ್ನು ನಮ್ಮೆಲ್ಲರ ಮುಂದೆ ಇಟ್ಟಿದ್ದಾರೆ. ಈ ವಿಚಾರ ಹೊಸದು ಎಂದು ನಾನು ಹೇಳಲಿಕ್ಕೆ ಬಯಸುವುದಿಲ್ಲ. ನನಗೆ ಅವಕಾಶ ಸಿಕ್ಕಿದಾಗಲೆಲ್ಲ ನಮ್ಮಲ್ಲಿ ನೀರಾವರಿ ಸೌಕರ್ಯ ಎಷ್ಟರಮಟ್ಟಿಗೆ ಇದೆ, ಅದನ್ನು ಇನ್ನೂ ಹೆಚ್ಚು ಮಾಡಬೇಕಾಗಿದ್ದರೆ ಎಷ್ಟರಮಟ್ಟಿಗೆ ಹಣ ನಮ್ಮಲ್ಲಿ ನೀರಾವರಿಯ ಮೇಲೆ ಖರ್ಚು ಮಾಡಬೇಕಾಗುತ್ತದೆ ಎನ್ನುವಂಥ ಅನೇಕ ವಿಚಾರಗಳನ್ನು ಈ ಸಭೆಯ ಮುಂದೆ ನಾನು ಇಟ್ಟಿದ್ದೇನೆ. ಇವತ್ತು ನಮ್ಮ ಸಂಸ್ಥಾನದಲ್ಲಿ ಅತಿ ದೊಡ್ಡದಾದ ಕೃಷ್ಣ ಮೇಲ್ದಂಡೆ ಯೋಜನೆಯನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳಬೇಕು ಅಥವಾ ಪ್ರತ್ಯೇಕವಾಗಿ ಅದಕ್ಕೆ ಧನ ಸಹಾಯವನ್ನು ಕೇಂದ್ರ ಸರ್ಕಾರದವರು ನೀಡಬೇಕು ಎನ್ನುವ ಠರಾವು ನಮ್ಮ ಮುಂದೆ ಇದೆ. ಎಲ್ಲ ಮಾನ್ಯ ಸದಸ್ಯರೂ ಈ ಠರಾವನ್ನು ಒಪ್ಪಿಕೊಂಡಿದ್ದಾರೆ. ನೀರಾವರಿ ಸೌಕರ್ಯ ನಮ್ಮ ಸಂಸ್ಥಾನದಲ್ಲಿ ಎಷ್ಟರಮಟ್ಟಿಗೆ ಇದೆ, ಎನ್ನುವಂಥದ್ದನ್ನು ಈ ಠರಾವಿನ ಮೇಲೆ ಮಾತನಾಡಿದ ಅನೇಕ ಸದಸ್ಯರು ಹೇಳಿದ್ದಾರೆ.

Mr. SPEAKER.—As per the agenda just now issued, the Assembly will meet tomorrow at 10 A.M. and there will be no Question Hour.

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಸಂಸ್ಥಾನದಲ್ಲಿ ನೀರಾವರಿ ಪ್ರದೇಶ ಎಷ್ಟು ಕಡಮೆ ಮಟ್ಟದಲ್ಲಿದೆ ಎನ್ನುವಂಥ ವಿಚಾರವನ್ನು ಈ ಠರಾವಿನ ಮೇಲೆ ಮಾತನಾಡಿದಂಥ ಅನೇಕ ಮಾನ್ಯ ಸದಸ್ಯರು ಒತ್ತಿ ಒತ್ತಿ ಹೇಳಿದ್ದಾರೆ. ಅದನ್ನು ನಾನು ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಸಂಸ್ಥಾನದಲ್ಲಿ ಒಟ್ಟು ಉಳುವುದಕ್ಕೆ ಯೋಗ್ಯವಾದ ಭೂಮಿ 350 ಲಕ್ಷ ಎಕರೆ ಇದೆ. ಇದರಲ್ಲಿ ಕೇವಲ 30 ಲಕ್ಷ ಎಕರೆಗೆ ಮಾತ್ರ ನೀರಾವರಿ ಸೌಕರ್ಯ ಲಭಿಸಿದೆ. ಉಳಿದ ಎಲ್ಲ ಭೂಮಿ ಮತ್ತು ಮಳೆಯ ಮೇಲೆ ಅವಲಂಬಿಸಿದೆ. ಮಳೆ ಸಕಾಲದಲ್ಲಿ ಬಂದರೆ ನಮ್ಮ ದೇಶದ ರೈತ ಬೆಳೆದುಕೊಳ್ಳು ವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೆ ಹೋದರೆ ಏನೂ ಬೆಳೆಯುವುದಕ್ಕೆ ಸಾಧ್ಯವಿಲ್ಲದಂಥ ಪರಿಸ್ಥಿತಿ ನಮ್ಮ ದೇಶದಲ್ಲಿದೆ. ಇಷ್ಟು ಕಡಮ ಎಕರೆಯ ನೀರಾವರಿ ಅನುಕೂಲತೆ ಬಹುಶಃ ನಮ್ಮ ರಾಷ್ಟ್ರದಲ್ಲಿ ಒಂದೆರಡು ಸಂಸ್ಥಾನಗಳನ್ನು ಬಿಟ್ಟರೆ ಮತ್ತೆ ಎಲ್ಲಿಯೂ ಇರಲಾರದು ಎಂದು ನನಗನ್ನಿಸುತ್ತದೆ. ಇವತ್ತು ಅಖಿಲ ಭಾರತದ ಸರಾಸರಿ 24 ಪರ್ಸೆಂಟ್ ಇದ್ದರೆ, ನಮ್ಮ ರಾಜ್ಯದ ನೀರಾವರಿ ಅನುಕೂಲ ಕೇವಲ 8.5 ಪರ್ಸೆಂಟ್ ಇದೆ. ಬಹಳ ಕಡಮೆ ಮಟ್ಟದಲ್ಲಿ ನಮ್ಮಲ್ಲಿ ನೀರಾವರಿ ಸೌಕರ್ಯವಿದೆ ಅದಕ್ಕಾಗಿ ಹೆಚ್ಚು ಹೆಚ್ಚು ಆದ್ಯತೆಯನ್ನು, ಹೆಚ್ಚು ಹೆಚ್ಚು ಗಮನವನ್ನು ನಮ್ಮಲ್ಲಿ ನೀರಾವರಿ ಸೌಕರ್ಯವನ್ನು ಹೆಚ್ಚಾಗಿ ಒದಗಿಸುವುದರ ಕಡೆಗೆ ಕೊಡಬೇಕಾಗಿದೆ. ಈ ಬಗ್ಗೆ ಈಗಾಗಲೇ ಸಾಕಷ್ಟು ಪ್ರಯತ್ನ ಗಳು ನಡೆಯುತ್ತಿವೆ. ಮೊದಲನೆಯ ಯೋಜನೆಯಲ್ಲಿ, ಎರಡನೆಯ ಯೋಜನೆಯಲ್ಲಿ, ಮೂರನೆಯ ಯೋಜನೆಯಲ್ಲಿ, ಹಲವಾರು ಕೆಲಸ ಕಾರ್ಯಗಳು, ದೊಡ್ಡ ದೊಡ್ಡ ಇರಿಗೇಷನ್ ಪ್ರಾಜೆಕ್ಟ್‌ಗಳು, ಮೀಡಿಯಂ ಇರೀಗೇಷನ್ ಪ್ರಾಜೆಕ್ಟ್ಸ್, ಈ ಗಾಗಲೇ ಮಂಜೂರಾಗಿ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡಿದ್ದೇವೆ. ಕೆಲವು ಮುಗಿಯುವ ಹಂತದಲ್ಲಿವೆ, ಕೆಲವು ಮುಗಿಯಲು ಇನ್ನೂ ಕೆಲವು ವರ್ಷಗಳು ಆಗುತ್ತವೆ ಮತ್ತು ಒಂದೆರಡು ಪ್ರಾಜೆಕ್ಟ್‌ಗಳನ್ನು ಮೊನ್ನೆ ತಾನೆ ಪ್ರಾರಂಭ ಮಾಡಿದ್ದೇವೆ. ಇಂಥ ಪರಿಸ್ಥಿತಿ ಇದ್ದಾಗ ಮೂರನಯ ಯೋಜನೆಯಲ್ಲಿ ನಾವು ತೆಗೆದುಕೊಂಡಿರುವ ನೀರಾವರಿ ಯೋಜನೆ ಗಳ ಅಂದಾಜು ಮೊತ್ತ 247 ಕೋಟಿ ರೂಪಾಯಿಗಳು. ನಾವು ಈಗಾಗಲೇ ಖರ್ಚು ಮಾಡಿರುವುದು 96 ಕೋಟಿ ರೂಪಾಯಿಗಳು. ಈಗ ತೆಗೆದುಕೊಂಡಿರುವ ಪ್ರಾಜೆಕ್ಟ್‌ಗಳನ್ನು ಮುಗಿಸಬೇಕಾದರೆ ನಾವು ಸುಮಾರು 150 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ನಾವು ಇವೊತ್ತು ಇದ್ದೇವೆ. ಮೂರನೇ ಯೋಜನೆಯಲ್ಲಿ ನೀರಾವರಿಗಾಗಿ ನಾವು ಒದಗಿಸಿರುವ ಹಣ ಎಷ್ಟು ಎಂದರೆ ಸುಮಾರು 40,765 ಲಕ್ಷದಷ್ಟು. ಇಷ್ಟು ಒದಗಿಸಿದ್ದರೂ ಕೂಡ

ನಾವು ಎಲ್ಲಾ ಕೆಲಸಗಳನ್ನೂ ಪೂರ್ತಿಯಾಗಿ ಮಾಡಲು ಅವಕಾಶ ಸಿಗಲಿಲ್ಲ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಹಣ ಒದಗಿಸಿದ್ದರೂ ಕೇವಲ 32-33 ಕೋಟಿಯಷ್ಟು ಹಣವನ್ನು ಮಾತ್ರ ಖರ್ಚು ಮಾಡುವುದಕ್ಕೆ ಸಾಧ್ಯವಾಯಿತು. ಇದಕ್ಕಿಂತ ಹೆಚ್ಚಾಗಿ ಖರ್ಚು ಮಾಡುವುದಕ್ಕೆ ಆಗಲಿಲ್ಲ. ಬಹುಶಃ ಕೆಲವು ಮಾನ್ಯ ಸದಸ್ಯರುಗಳು ಹೇಳಬಹುದು, ನಮಗೆ ಒದಗಿಸಿದ ಹಣವನ್ನು ಕೆಲವು ಕಡೆಗಳಲ್ಲಿ ಉಪಯೋಗ ಮಾಡದೆ ಹಾಗೆ ಲ್ಯಾಪ್ಸ್ ಆಗುವಂತೆ ಮಾಡಿದ್ದಾರೆ ಎಂದು. ಮತ್ತು ಇದಕ್ಕಾಗಿ ತಕ್ಕ ಸಿಬ್ಬಂದಿ ಕೂಡ ಇಲ್ಲ ಎಂದೂ ಹೇಳಿದರು. ನೀರಾವರಿಗಾಗಿ ಸುಮಾರು 30-34 ಕೋಟಿಯಷ್ಟು ಹಣ ಉಪಯೋಗಮಾಡಬೇಕೆಂದು ಒದಗಿಸಿದ್ದರೂ ಅಷ್ಟನ್ನೂ ಖರ್ಚು ಮಾಡದೇ ಇರುವುದಕ್ಕೆ ಕಾರಣ ನಮ್ಮಲ್ಲಿ ಅತಿ ದೊಡ್ಡದಾದ ಶರಾವತಿ ಯೋಜನೆಯನ್ನು ಆದಷ್ಟು ತೀವ್ರವಾಗಿ ಮುಗಿಸಬೇಕೆಂದು ಮತ್ತು ಇದನ್ನು ಮುಗಿಸಿದರೆ ದೇಶಕ್ಕೆ ಮತ್ತು ಜನಕ್ಕೆ ಲಾಭವಾಗುತ್ತದೆ ಎಂದು ಇತರ ನೀರಾವರಿ ಯೋಜನೆಗಳನ್ನು ಬದಿಗಿಟ್ಟು ಇಟ್ಟಿದ್ದು ಅದಕ್ಕೆ ದುಡ್ಡನ್ನು ಕೂಡ ಇಲ್ಲಿಗೆ ಡೈವರ್ಟ್ ಮಾಡುವ ಪರಿಸ್ಥಿತಿ ಬಂತು. ಈ ರೀತಿಯಾಗಿ ಆದುದರಿಂದ ನಮಗೆ ನಾಲ್ಕನೇ ಯೋಜನೆಯಲ್ಲಿ ಈಗಾಗಲೇ ತೆಗೆದು ಕೊಂಡಿರುವ ಅನೇಕ ಕೆಲಸಕಾರ್ಯಗಳು ಹಾಗೇ ಉಳಿದಿರುವುದರಿಂದ ಅವಕ್ಕೆ ಸುಮಾರು 150 ಕೋಟಿಯಷ್ಟು ಹಣವನ್ನು ಖರ್ಚು ಮಾಡಬೇಕಾಗಿರುವ ಪರಿಸ್ಥಿತಿ ಇದೆ. ಇದು ತಮಗೆಲ್ಲರಿಗೂ ಗೊತ್ತಿದೆ. ಮತ್ತು ನಾಲ್ಕನೆ ಯೋಜನೆಯ ಮೊದಲನೆಯ ವರ್ಷದಲ್ಲಿ ಯೋಜನೆ ಕೆಲಸಗಳಿಗಾಗಿ ಸುಮಾರು 80-82 ಕೋಟಿಯಷ್ಟು ಎಂದು ಒದಗಿಸಿದ್ದೇವೆ. ಮತ್ತು ಈಗ ಇನ್ನೂ ಉಳಿದಿರುವ ಹಾಗೂ ಖರ್ಚು ಮಾಡದೇ ಇರುವ ಯೋಜನೆಯ ಹಳೆಯ ಕೆಲಸಗಳಿಗಾಗಿ ಸುಮಾರು 150 ಕೋಟಿಯಷ್ಟು ಹಣ ಬೇಕಾಗುತ್ತದೆ. ಇದರಿಂದ ಹೊಸ ಕೆಲಸಗಳನ್ನು ಮಾಡುವುದರಲ್ಲಿ ಅರ್ಧ ಕೆಲಸಗಳೂ ಆಗುತ್ತವೋ ಇಲ್ಲವೋ ಎನ್ನುವ ಒಂದು ಶಂಕೆಯೂ ಬಂದಿದೆ. ನಾಲ್ಕನೆ ಯೋಜನೆಯಲ್ಲಿ ಕೂಡ ನೀರಾವರಿಯ ಕೆಲಸಗಳು ಸಾಕಷ್ಟು ಬರುವ ಹಾಗಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಇಂತಹ ಒಂದು ಸ್ಥಿತಿಯಲ್ಲಿ ನಾವು ಇರುವುದರಿಂದ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗಾಗಿ 120 ಕೋಟಿಯಷ್ಟು ಖರ್ಚು ಮಾಡಬೇಕಾಗಿದೆ. ಇಷ್ಟು ಖರ್ಚು ಮಾಡಿದರೆ ಇಲ್ಲಿ ಬರಗಾಲಕ್ಕೆ ಸಿಕ್ಕುವ ಮೂರು ಜಿಲ್ಲೆಗಳಿಗೆ ಅನುಕೂಲವಾಗುತ್ತದೆ ಮತ್ತು ಸುಮಾರು 12-13 ಲಕ್ಷ ಎಕರೆ ಯಷ್ಟು ಭೂಮಿ ನೀರಾವರಿಗೆ ಸಿಗುತ್ತದೆ. ಇದರಿಂದ ಇಲ್ಲಿನ ಜನಗಳಿಗೆ ಬಹಳ ಲಾಭವಾಗುತ್ತದೆ. ಆದುದರಿಂದ ಇಂತಹ ದೊಡ್ಡ ಯೋಜನೆಯನ್ನು ಕೇಂದ್ರ ಸರಕಾರದವರೇ ವಹಿಸಿಕೊಂಡು ಇದಕ್ಕಾಗಿ ಈಗ ಸೀಲಿಂಗ್ ಲಿಮಿಟ್ ಪ್ಲಾನಿನಲ್ಲಿ ಏನು ಮಾಡಿದ್ದಾರೋ ಅದಕ್ಕೆ ಹೊರಗಡೆ ಸಾಕಷ್ಟು ಸಹಾಯ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ ಮತ್ತು ಇದನ್ನು ಅನೇಕ ದಿವಸಗಳಿಂದಲೂ ಕೇಂದ್ರಕ್ಕೆ ಹೇಳುತ್ತಾ ಬಂದಿದ್ದೇವೆ. ಆದರೆ ಇಲ್ಲಿ ಕೆಲವು ಮಾನ್ಯ ಸದಸ್ಯರು 'ನಮ್ಮನ್ನು ಬರೀ ಅಂಧಕಾರದಲ್ಲಿಟ್ಟಿದ್ದಾರೆ, ನಮಗೆ ಏನೂ ಗೊತ್ತಾಗುತ್ತಿಲ್ಲ' ಎನ್ನುವ ಮಾತನ್ನು ಇಲ್ಲಿ ಹೇಳಿದರು. ಮತ್ತು ಇನ್ನೂ ಅನೇಕ ಸದಸ್ಯರುಗಳು ಈಗ ತಂದಿರುವ ಈ ಠರಾವಿನ ಮೂಲಕ ಕೇಂದ್ರಕ್ಕೆ ಸಲಹೆ ಮಾಡಿ ನಮಗೆ ಈ ಯೋಜನೆ ಮಾಡಲು ಶಕ್ತಿ ಇಲ್ಲ ಅದಕ್ಕಾಗಿ ಅವರು ನಮ್ಮ ಸಹಾಯಕ್ಕೆ ಬರಬೇಕೆಂದು ಒತ್ತಾಯ ತರಬೇಕು, ಇಲ್ಲದೆ ಹೋದರೆ ಇದನ್ನು ಮಾಡುವುದು ಕಷ್ಟವಾಗುತ್ತದೆ ಎಂದೂ ಹೇಳಿದ್ದಾರೆ. ಇದರ ಬಗ್ಗೆ ನಾನು ಮೊದಲಿಂದಲೂ ಇಲ್ಲಿ ಹೇಳುತ್ತಿದ್ದೇನೆ. ಈ ಯೋಜನೆ ಬಗ್ಗೆ ಕೇಂದ್ರಕ್ಕೆ ನಮ್ಮ ಮುಖ್ಯ ಮಂತ್ರಿಗಳು ಕಾಗದ ಪತ್ರಗಳನ್ನು ಬರೆಯುತ್ತಲೇ ಇದ್ದಾರೆ ಮತ್ತು ದೆಹಲಿಗೆ ಆಗಾಗ ಹೋದಾಗ ಅಲ್ಲಿ ಮುಖತಃ ಪ್ಲಾನಿಂಗು ಕಮಿಷನ್ನಿನವರಿಗೂ, ಪ್ರಧಾನ ಮಂತ್ರಿಗಳವರಿಗೂ, ಹಾಗೂ ಅಲ್ಲಿರುವ ಫೈನಾನ್ಸ್ ಮಿನಿಸ್ಟರವರಿಗೂ ಒತ್ತಾಯ ಮಾಡಿ ಆಶ್ವಾಸನೆಗಳನ್ನು ಪಡೆಯುತ್ತಾ ಬಂದಿದ್ದಾರೆ ಮತ್ತು ಇನ್ನೂ ಕಾಗದಗಳನ್ನು ಬರೆಯುತ್ತಲೇ ಇದ್ದಾರೆ. ಈ ಯೋಜನೆಯನ್ನು ಕೇಂದ್ರವೇ ವಹಿಸಿಕೊಳ್ಳಬೇಕು ಇಲ್ಲದೆ ಹೋದರೆ ಇದಕ್ಕಾಗಿ ಪ್ರತ್ಯೇಕವಾದ ಧನ ಸಹಾಯವನ್ನು ಪೂರ್ತಿಯಾಗಿ ಮಾಡಬೇಕು ಎನ್ನುವ ಬೇಡಿಕೆ ಇವೊತ್ತಿನ ದಿನ ಮಾಡುತ್ತಿಲ್ಲ. ಈ ಬೇಡಿಕೆಯನ್ನು ಬಹಳ ದಿನದಿಂದಲೂ ಮಾಡುತ್ತಲೇ ಬರುತ್ತಿದೆ. ಮಾನ್ಯ ಸದಸ್ಯರು ಇವೊತ್ತು ಇಂತಹ ಒಂದು ಠರಾವನ್ನು ಇಲ್ಲಿ ತಂದಿದ್ದಾರೆ ಎಂದು ಈಗ ಹೇಳುವ ಮಾತು ಇದಲ್ಲ. ಇದಕ್ಕಾಗಿ ಮೊದಲಿಂದಲೂ ಪ್ರಯತ್ನ ಮಾಡುತ್ತಲೇ ಬರುತ್ತಿದ್ದೇವೆ ಮತ್ತು ಇನ್ನೂ ಇದರ ಪ್ರಯತ್ನವನ್ನು ಮುಂದುವರಿಸುತ್ತೇವೆ. ಬಹುಶಃ ಜಯ ನಮಗೆ ಸಿಗಬಹುದು ಎನ್ನುವ ಒಂದು ಆಸೆಯೂ ನಮಗಿದೆ. ಎಷ್ಟು ತೀವ್ರವಾಗಿ ಪ್ರಯತ್ನ ಮಾಡಬೇಕೋ ಅಷ್ಟನ್ನೂ ನಾವು ಮಾಡುತ್ತಾ ಬರುತ್ತಿದ್ದೇವೆ. ಅಲ್ಲದೆ ನಮಗೆ ಕೇಂದ್ರದಿಂದ ಬರಬೇಕಾದಪಾಲು ಸರಿಯಾಗಿ ಬರುತ್ತಿಲ್ಲ ಇತರ ಪ್ರಾಂತಗಳವರಿಗೆ ಬರುತ್ತಿದೆ. ನಾವು ನಮ್ಮ ಪಾಲಿನ ಹಣವನ್ನೂ ಕೇಂದ್ರದವರಿಂದ ಪಡೆಯಲು ಆಗುತ್ತಿಲ್ಲ ಎನ್ನುವ ಮಾತನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಕೃಷ್ಣರವರು ಹೇಳಿದರು. ನಾನು ಮೂರು ವರ್ಷಕ್ಕೆ ಮೊದಲೇ ಇಲ್ಲಿ ಹೇಳಿದ್ದೆ. ಕೃಷ್ಣಾನದಿಯ ನೀರನ್ನು ಪಡೆಯುವಾಗ ನಮಗೆ ಹೆಚ್ಚು ಪಾಲು ಬೇಕು ಎನ್ನುವ ಒಂದು ದೊಡ್ಡ ಆಸೆ ಇಟ್ಟುಕೊಂಡಿದ್ದೆವು. ಆದರೆ ನಮಗೆ ಸಿಗುವ

(ಶ್ರೀ ವೀರೇಂದ್ರ ಪಾಟೀಲ್)

ನೀರನ್ನು ಸದ್ಯಕ್ಕೆ ನಾವು ಉಪಯೋಗ ಮಾಡದೇ ಇರುವ ಸ್ಥಿತಿಯಲ್ಲಿದ್ದೇವೆ. ಆದರೂ ನಾವು ದಿವಂಗತ ಶ್ರೀ ಲಾಲ್ ಬಹದ್ದೂರು ಶಾಸ್ತ್ರಿಯವರನ್ನು ಇಲ್ಲಿಗೆ ಕರೆದುಕೊಂಡು ಬಂದು ಅಪ್ಪರ್ ಕಷ್ಣಾ ಯೋಜನೆಗಾಗಿ ಶಂಕುಸ್ಥಾಪನೆ ಮಾಡಿದೆವು. ಅನಂತರ ನಾವೇನನ್ನೂ ಮಾಡಿಲ್ಲ ಎಂದೂ ಕೆಲವರು ಇಲ್ಲಿ ಹೇಳಿದರು. ಆದರೆ ಮಹಾರಾಷ್ಟ್ರ ಸರಕಾರದವರು ಅಪ್ಪರ್ ಭೀಮಾ ಯೋಜನೆಯನ್ನು ಮಾಡಲು ಕೇಂದ್ರದವರ ನೆರವು ಪಡೆದು ಸುಮಾರು 15 ತಿಂಗಳ ಅವಧಿಯಲ್ಲೇ ಮುಗಿಸಿದರು ನಾವು ಇಲ್ಲೇಕೆ ಹಾಗೆ ಮಾಡಲಿಲ್ಲ ಎಂದೂ ಇಲ್ಲಿ ಹೇಳಿದರು. ಅದ ದರಿಂದ ನಾವು ಕೇಂದ್ರ ಸರಕಾರವನ್ನು ನೆರವಿಗಾಗಿ ಕೇಳಲೇ ಬೇಕು ಎಂದು ಹೇಳುವುದೇನೋ ಸರಿ.* ನಮಗೆ ಅಷ್ಟು ಅವಸರವಿಲ್ಲದಿದ್ದರೆ ನಾವು ಏತಕ್ಕಾಗಿ ದಿವಂಗತ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಶಾಸ್ತ್ರಿಯವರನ್ನು ಇಲ್ಲಿಗೇಕೆ ಕರೆದುಕೊಂಡು ಬಂದು ಕೃಷ್ಣಾ ಯೋಜನೆಗಾಗಿ ಶಂಕುಸ್ಥಾಪನೆಯನ್ನು ಮಾಡಿಸಿದೆವು ಎನ್ನುವುದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಇಂತಹ ದೊಡ್ಡ ಯೋಜನೆಗೆ ನಾವು ಕೈಹಾಕುತ್ತಿರುವುದರಿಂದ ಇದನ್ನು ಇಷ್ಟೇ ದಿವಸಗಳಲ್ಲಿ ಮುಗಿಸುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ ಮತ್ತು ಹೇಳುವಂತಹ ಪರಿಸ್ಥಿತಿಯೂ ಇರಲಿಲ್ಲ, ಇದು ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಈ ಯೋಜನೆಯನ್ನು ಮಾಡಲು ನಮ್ಮ ಶಕ್ತಿಗೆ ಮೀರಿರುವುದರಿಂದ ಮತ್ತು ಈ ಭಾಗದಲ್ಲಿ ಮಳೆ ಇಲ್ಲದೆ ಇರುವ ಸಮಸ್ಯೆಯೂ ಇರುವುದರಿಂದ ಕೇಂದ್ರ ಸರಕಾರದವರು ಪ್ರತ್ಯೇಕವಾಗಿ ಸಹಾಯ ಕೊಟ್ಟರೆ ಅನುಕೂಲವಾಗುತ್ತದೆ ಎಂದು ನಾವೂ ಕೂಡ ಇದನ್ನು ಬೇಗನೆ ಮುಗಿಸಬೇಕೆಂದು ಕೇಂದ್ರ ಸರಕಾರದ ಮೇಲೆ ಒತ್ತಾಯ ಮಾಡುತ್ತ ಬರುತ್ತಿದ್ದೇವೆ. ಇನ್ನೂ ಒಂದು ಪ್ರಶ್ನೆಯನ್ನು ಶ್ರೀ ಕೃಷ್ಣಾರವರು ಇಲ್ಲಿ ಹೇಳಿದರು. ನಮ್ಮ ಕೈಯಲ್ಲಿ ಇದನ್ನು ಒತ್ತಾಯ ಮಾಡಲು ಸರಿಯಾದ ನಾಯಕತ್ವವಿಲ್ಲ, ಇದರ ಪರಿಣಾಮವಾಗಿ ಅನೇಕ ಇತರ ಪ್ರಾಂತಗಳಿಗೆ ಕೇಂದ್ರದವರು ನೆರವು ಕೊಡುತ್ತಿರುವ ಹಾಗೆ ಈ ದೇಶದ ಪ್ರಾಜೆಕ್ಟುಗಳಿಗೆ ಕೊಡದೇ ಇದ್ದಾರೆ ಮತ್ತು ಅನೇಕ ಸಲ ಹೇಳಿದರೂ ಇದಕ್ಕೆ ಸಹಾಯ ಇನ್ನೂ ಸಿಕ್ಕಲಿಲ್ಲ ಎಂದೂ ಹೇಳಿದರು. ಒಂದು ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಯೋಜನೆಯಲ್ಲಿ ಮೊದಲು ಸೇರಿಸಿರಲಿಲ್ಲ. ನಾವೇನೋ ಇದನ್ನು ಪ್ರಾರಂಭ ಮಾಡಬೇಕು ಎಂದು ಇತ್ತು. ಇದಕ್ಕೆ ಕೇಂದ್ರ ಸರಕಾರ ಒಪ್ಪಿಗೆ ಕೊಟ್ಟಿರಲಿಲ್ಲ. ಆದರೆ ನಮ್ಮ ಸ್ಟೇಟಿನಲ್ಲಿ ನಾಯಕತ್ವದಲ್ಲಿ ನಮ್ಮ ಮುಖ್ಯಮಂತ್ರಿಗಳು ಇಲ್ಲದೇ ಹೋಗಿದ್ದರೆ ಅವರು ತಮ್ಮ ಪ್ರಭಾವವನ್ನು ಬೀರದೇ ಇದ್ದಿದ್ದರೆ ಇದು ಮೂರನೇ ಯೋಜನೆಯಲ್ಲಿ ಸೇರ್ಪಡೆಯೇ ಆಗುತ್ತಿರಲಿಲ್ಲ. ಯಾವುದೋ ಸೆಂಟ್ರಲ್ ಪ್ರಾಜೆಕ್ಟುಗಳಿಗಾಗಿ ಎಂದು ಸುಮಾರು 5-10 ಕೋಟಿಯಷ್ಟು ಹಣ ಕೊಟ್ಟು ಆ ಯೋಜನೆಗಳನ್ನು ಮಾಡಬೇಕೆಂದು ಹೇಳಿದ್ದರೆ ನಾನಾದರೂ ಒಪ್ಪುತ್ತಿದ್ದೆ. ಆದರೆ ಇದು ಇಲ್ಲಿಗೆ ಒಂದು ದೊಡ್ಡ ಪ್ರಾಜೆಕ್ಟು. ಬಹುಶಃ ನಮ್ಮ ಮೈಸೂರು ಸಂಸ್ಥಾನದಲ್ಲೆಲ್ಲಾ ಇಷ್ಟು ದೊಡ್ಡ ಪ್ರಾಜೆಕ್ಟು ಇರಲೂ ಇಲ್ಲ ಮುಂದಕ್ಕೂ ಇಂತಹ ದೊಡ್ಡ ಪ್ರಾಜೆಕ್ಟ್ ಮಾಡುವುದಕ್ಕೆ ಸಾಧ್ಯವೂ ಇಲ್ಲ. ಮೂರನೇ ಯೋಜನೆಯಲ್ಲಿ ಇಲ್ಲದೇ ಇದ್ದರೂ ಸುಮಾರು 120 ಕೋಟಿ ರೂಪಾಯಿಗಳ ಖರ್ಚಿನಲ್ಲಿ ಇಲ್ಲಿ ಸುಮಾರು 226 ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರನ್ನುಪಯೋಗಮಾಡಿಕೊಂಡು ಈ ನೀರಾವರಿ ಯೋಜನೆ ಮಾಡಬೇಕಾಗಿದೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಇದು ಬರಲಾರದೇ ಹೋಗಿದ್ದರೆ ನಮ್ಮ ದೇಶದ ಮುಖ್ಯಮಂತ್ರಿಗಳ ಪ್ರಭಾವವಿಲ್ಲದೇ ಇದ್ದರೆ ಹಿಂದೆ ಇದ್ದ ಪ್ರಧಾನ ಮಂತ್ರಿಗಳು ಇದಕ್ಕಾಗಿ ಬಂದು ಇಲ್ಲಿ ಶಂಕುಸ್ಥಾಪನೆ ಮಾಡುತ್ತ ಇರಲಿಲ್ಲ. ಇದೊಂದು ನಮಗೆ ದೊಡ್ಡ ಅಚೀವ್‌ಮೆಂಟು ಎಂದು ಹೆಮ್ಮೆಯಿಂದ ಹೇಳಬಹುದು. ಇಂತಹ ಒಂದು ದೊಡ್ಡ ಯೋಜನೆಯನ್ನು ಮಾಡಲು ನಮ್ಮಲ್ಲಿ ಸಾಕಷ್ಟು ದುಡ್ಡಿಲ್ಲ ಎಂದು ನಾವು ಕುಳಿತುಕೊಳ್ಳುವ ಹಾಗಿಲ್ಲ. ಇದನ್ನು ಹೇಗಾದರೂ ಮಾಡಿ ಮುಗಿಸುವ ಭರವಸೆ ಇದೆ. ಕೇಂದ್ರ ಸರಕಾರದವರು ನಮ್ಮ ಸಹಾಯಕ್ಕೆ ಬರುವ ಭರವಸೆಯೂ ಇದೆ. ಇದಕ್ಕಾಗಿ ತ್ವರಿತವಾಗಿ ಪ್ರಯತ್ನಗಳೂ ನಡೆಯುತ್ತಿವೆ. ಅಲ್ಲದೆ ಕೃಷ್ಣಾ ನದಿಯ ನೀರಿನಲ್ಲಿ ನಮಗೆ ಸರಿಯಾದ ಹಂಚಿಕೆಯಾಗಿಲ್ಲ ಎಂದು ಇದರ ಬಗ್ಗೆ ಹೆಚ್ಚು ಪಾಲು ಕೊಡುವ ಬಗ್ಗೆ ಇನ್ನೂ ಪ್ರಯತ್ನಗಳು ನಡೆಯುತ್ತಲೇ ಇವೆ. ಕೇಂದ್ರ ಸರಕಾರದವರು ಒಂದು ಸ್ಟೇಟ್‌ಮೆಂಟು ಕೊಟ್ಟು ತಾತ್ಪೂರ್ವಿಕವಾಗಿ ನೀರಿನ ಹಂಚಿಕೆಯನ್ನು ಈಗ ಮಾಡಿದ್ದರೂ ಇದು ನಮಗೆ ಸಮಾಧಾನವಾಗಿಲ್ಲ. ನಮಗೆ 600 ಟಿ.ಎಂ.ಸಿ.ಯಷ್ಟು ನೀರನ್ನು ಮಾತ್ರ ಕೊಟ್ಟಿದ್ದಾರೆ. ಮಹಾರಾಷ್ಟ್ರಕ್ಕೆ 400 ಟಿ.ಎಂ.ಸಿ. ಎಂದು ಹಾಗೂ ಬೇರೆ ರಾಜ್ಯಗಳಿಗೆ 800 ಅಥವಾ 900 ಟಿ.ಎಂ.ಸಿ.ಯಷ್ಟು ಎಂದು ಮಾಡಿದ್ದರೂ ಕೇಂದ್ರದವರು 1976ರ ವೇಳೆಗೆ ಮತ್ತೆ ಬನ್ನಿ ಸಾಕಷ್ಟು ನೀರನ್ನು ಕೊಡುತ್ತೇವೆ. ಅಷ್ಟರಲ್ಲಿ ಕೊಟ್ಟಿರುವಷ್ಟು ನೀರನ್ನು ಉಪಯೋಗಮಾಡಿಕೊಳ್ಳಿ ಎಂದು ನಮಗೆ ಹೇಳಿದ್ದಾರೆ. ಆದರೆ ನಾವು ಎಲ್ಲ ನೀರನ್ನೂ ಉಪಯೋಗಮಾಡಿಕೊಳ್ಳುವ ಶಕ್ತಿ

ಇಲ್ಲ, ನಾವು ದುರ್ಬಲರಾಗಿದ್ದೇವೆ ಎಂದು ಕೆಲವರು ಹೇಳಬಹುದು. ಆದರೆ ನಮಗೆ ಕೊಟ್ಟಿರುವ ನೀರು 600 ಟಿ.ಎಂ.ಸಿ.ಯಷ್ಟು ಮಾತ್ರ. 1976ರ ವೇಳೆಗೆ ನಾವು ಈ ನೀರನ್ನು ಉಪಯೋಗ ಮಾಡಿಕೊಳ್ಳದೇ ಹೋದರೆ ನೀರಾವರಿಗೆ ಹೆಚ್ಚು ಉಪಯೋಗವಾಗುವುದಿಲ್ಲ. ಆದ್ದರಿಂದ ಎಲ್ಲ ಅಭಿವೃದ್ಧಿ ಕೆಲಸಗಳನ್ನೂ ನಿಲ್ಲಿಸಿ ಈ ನೀರನ್ನು ನೀರಾವರಿಗಾಗಿ ಉಪಯೋಗಮಾಡಿಕೊಳ್ಳಲೇ ಬೇಕಾಗಿದೆ. ಕಂಪ್ಲೀಟ್ ಯುಟಿಲೈಸೇಷನ್ ಅಥವಾ ಪೂರ್ತಿಯಾಗಿ ನೀರನ್ನುಪಯೋಗಮಾಡಿಕೊಳ್ಳ ಬಹುದು ಎಂದು ನಾನು ಇಲ್ಲಿ ಹೇಳುತ್ತಿಲ್ಲ. ಕೊನೆಯ ಪಕ್ಷ ನಾವು ಕಮಿಟ್ ಮಾಡಲೇಬೇಕಾಗು ತ್ತದೆ. ಅಪ್ಪರ್ ಕೃಷ್ಣಾ ಯೋಜನೆಗಾಗಿ 226 ಟಿ.ಎಂ.ಸಿ.ಯಷ್ಟು ಬುಕ್ ಮಾಡಬೇಕಾಗುತ್ತದೆ ಮತ್ತು ಹಾಗೆ ಮಾಡಿದ್ದೇವೆ. ಮತ್ತು ಮೊದಲನೇ ಸ್ಟೇಜಿನಲ್ಲಿ 116 ಟಿ.ಎಂ.ಸಿ.ಯಷ್ಟು ಎಂದು ಬುಕ್ ಮಾಡಿ ಮತ್ತು ಇದಕ್ಕಾಗಿ ಪೂರ್ತಿ ಯೋಜನೆಗಳನ್ನು ಮಾಡಿ ಅವು ಕಾರ್ಯಗತವಾಗುವ ಹಾಗೆ ಮಾಡಲು ಪ್ರಯತ್ನಗಳು ನಡೆಯುತ್ತಿವೆ. ಇಲ್ಲಿಯವರೆಗೂ ನಾವು ಖರ್ಚು ಮಾಡಿರುವುದು ಬಹಳ ಕಡಿಮೆ. ಈ ಯೋಜನೆಯನ್ನು ನಾವು ಪೂರ್ತಿಯಾಗಿ ಮಾಡಿದರೆ ಇದರಿಂದ ಸುಮಾರ 35 ಲಕ್ಷ ಜನರಿಗೆ ಲಾಭವಾಗುತ್ತದೆ ಮತ್ತು ನಮ್ಮ ಸ್ಟೇಟಿಗೆ ಕೂಡ ಇದರಿಂದ ಒಂದು ದೊಡ್ಡ ಲಾಭವಾಗುತ್ತದೆ. ಮತ್ತು ಇದರಿಂದ ಸುಮಾರು 12-13 ಲಕ್ಷ ಎಕರೆಯಷ್ಟು ಭೂಮಿಗೆ ನೀರಾವರಿ ಸೌಕರ್ಯ ದೊರಕುತ್ತದೆ. ಇನ್ನೂ 12-13 ಲಕ್ಷ ಟನ್ನುಗಳಷ್ಟು ಹೆಚ್ಚು ಆಹಾರ ಬೆಳೆಯಲು ಅನುಕೂಲವಾಗುತ್ತದೆ ಮತ್ತು ಹೆಚ್ಚು ಉತ್ಪತ್ತಿ ಬರುತ್ತದೆ. ಈ ಭಾಗದಲ್ಲಿ ಆಗಾಗ್ಗೆ ಬರಗಾಲ ಬರುತ್ತಲೇ ಇರುತ್ತದೆ. ಸಾಕಷ್ಟು ಬರಗಾಲದ ಭಾಗಗಳು ಆಗಿದ್ದರೂ ಕೂಡ ಈಚೆಗೆ ಸ್ವಲ್ಪ ಮಳೆ ಆ ಭಾಗದಲ್ಲಿ ಬಂದುದರಿಂದ ಅಲ್ಲಿ ಕೆಲವು ಕಡೆಗಳಲ್ಲಿ ಜೋಳದ ಬೆಳೆ ಬಹಳ ಚೆನ್ನಾಗಿ ಆಗಿರುವುದರಿಂದಾಗಿ ನಮ್ಮ ಮೈಸೂರಿನ ಈ ಕಡೆಯ ಭಾಗಗಳಿಗೆ ಅಲ್ಲಿಂದ ಜೋಳವನ್ನು ತಂದು ಸ್ವಲ್ಪಮಟ್ಟಿಗೆ ಇಲ್ಲಿ ಹಂಚುತ್ತಿದ್ದಾರೆ. ಇಲ್ಲದಿದ್ದರೆ ಇಲ್ಲೂ ಜೋಳವೇ ಕಾಣಿಸುತ್ತಿರಲಿಲ್ಲ.

5-30 P.M.

ನಮ್ಮ ಸಂಸ್ಥಾನದಲ್ಲಿ ಈ ಯೋಜನೆಗಳಾಗುವುದರಿಂದ ಸುಮಾರು 13—14 ಲಕ್ಷ ಟನ್ ಉತ್ಪನ್ನ ಹೆಚ್ಚಾಗುತ್ತದೆ. ಇವು ದೊಡ್ಡ ಯೋಜನೆಗಳಾದ್ದರಿಂದ ಎರಡನೇ phase ನಲ್ಲಿ ಮಾಡಿಸ ಬೇಕೆಂದು ಕಾರ್ಯಕ್ರಮ ಇದೆ. ಮೊದಲನೆ ಫೇಜ್‌ನಲ್ಲಿ ಅವಕ್ಕೆ ಸುಮಾರು 59 ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಿ 116 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗ ಮಾಡಿಕೊಂಡು ಅದರಿಂದ 6 ಲಕ್ಷ ಎಕರೆಗೆ ನೀರಾವರಿ ಅನುಕೂಲತೆ ಆಗಬೇಕೆಂಬ ಯೋಜನೆಯನ್ನು ಹಾಕಿಕೊಂಡಿದ್ದೆವು. 6 ಲಕ್ಷದಲ್ಲಿ 3 ಲಕ್ಷ 20 ಸಾವಿರ ಎಕರೆ ಬಿಜಾಪುರ, ಗುಲಬರ್ಗಾ ಡಿಸ್ಟ್ರಿಕ್ಟ್‌ನಲ್ಲಿ ಮತ್ತು ಡೈವರ್ಷನ್ ನಿಂದ 2 ಲಕ್ಷ 80 ಸಾವಿರ ಗುಲ್ಬರ್ಗ ಡಿಸ್ಟ್ರಿಕ್ಟ್‌ನಲ್ಲಿ ಇದರಿಂದ ಅನುಕೂಲವಾಗುತ್ತದೆ. ಎರಡನೆಯ ಫೇಜ್‌ನಲ್ಲಿ ಸುಮಾರು 56 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅದರಿಂದ 110 ಟಿ. ಎಂ. ಸಿ. ಎಫ್.ಟಿ. ನೀರನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಮಾಡಿರುತ್ತೇವೆ. ಆದ್ದರಿಂದ 2 ಲಕ್ಷ 30 ಸಾವಿರ ಎಕರೆ ಬಿಜಾಪುರದಲ್ಲಿ 3 ಲಕ್ಷ 70 ಸಾವಿರ ರಾಯಚೂರಿನಲ್ಲಿ ನೀರಾವರಿಯಾಗುತ್ತದೆ, ಇಂತಹ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಈ ರೀತಿಯಿಂದ ಸುಮಾರು 115—120 ಕೋಟಿ ರೂಪಾಯಿಗಳ ಯೋಜನೆಗಳಾಗುತ್ತವೆ. ಇಲ್ಲಿಯವರೆಗೂ ಇದಕ್ಕೆ ಖರ್ಚು ಮಾಡಿದ ಹಣ ಡಿಸೆಂಬರ್ 65ರ ಅಂತ್ಯದವರೆಗೆ 157 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. 4ನೇ ಪಂಚವಾರ್ಷಿಕಯೋಜ ನೆಯ ಮೊದಲನೆ ವರ್ಷದಲ್ಲಿ ಕೇವಲ 20 ಲಕ್ಷ ರೂಪಾಯಿಗಳನ್ನು ಮಾತ್ರ ಪ್ರೊವೈಡ್ ಮಾಡಿದ್ದೇವೆ. ತಮಗೆ ಗೊತ್ತಿದ್ದ ಹಾಗೆ ಮೀಡಿಯಂ ಮತ್ತು ಮೇಜರ್ ಇರಿಗೇಷನ್‌ಗೆ 66—67 ರಲ್ಲಿ ಕೇವಲ 5 ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೇವೆ. ಅದರಲ್ಲಿ ಎಲ್ಲಾ ಪ್ರಾಜೆಕ್ಟ್‌ಗಳಿಗೂ ಒದಗಿ ಸುವುದಕ್ಕೆ ಸಾಧ್ಯವಾಗದ ಪರಿಸ್ಥಿತಿಯಿರುವುದರಿಂದ ಇದರಲ್ಲಿ ಕೇವಲ 20 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿದಂತಹ 80—82 ಕೋಟಿ ರೂಪಾಯಿಗಳಲ್ಲಿ ಅಪ್ಪರ್ ಕೃಷ್ಣಾಕ್ಕೆ ಕೇವಲ 14 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ತಮಗೆ ಅನಿಸಬಹುದು, ಈ ವೇಗದಲ್ಲಿ ಹೋದರೆ ಈ ಯೋಜನೆಗಳನ್ನು ಮುಗಿಸುವುದಕ್ಕೆ 25—50 ವರ್ಷ ಬೇಕಾಗುತ್ತದೆ ಎಂದು. ಇವತ್ತು ಇನ್ನೂ ಪ್ರಯತ್ನ ಮಾಡುತ್ತಾ ಇದ್ದೇವೆ ಈ ಒಂದು ದೊಡ್ಡ ಯೋಜನೆಯನ್ನು ಕೇಂದ್ರಸರ್ಕಾರದವರೇ ತೆಗೆದುಕೊಂಡದ್ದೇ ಆದರೆ, ಅವರು ಧನ ಸಹಾಯ ಕೊಡುವುದಕ್ಕೆ ಮನಸ್ಸು ಮಾಡಿದ್ದೇ ಆದರೆ ಇದಕ್ಕೆ ಖರ್ಚಾಗುವಂತಹ ದುಡ್ಡನ್ನು ಎರಡನೇ ಪ್ರಾಜೆಕ್ಟ್‌ಗಳಿಗೆ ಖರ್ಚು ಮಾಡಿದರೆ ಇನ್ನು ಉಳಿದ ಎಲ್ಲಾ ಪ್ರಾಜೆಕ್ಟ್‌ಗಳನ್ನೂ ನಾಲ್ಕನೆ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಒಂದು ಹಂತಕ್ಕೆ ತರಬಹುದು, ಎಲ್ಲವನ್ನೂ ಮುಗಿಸುವಂತಹ ಪರಿಸ್ಥಿತಿ ಬರಬಹುದು. ಈ ವಿಚಾರದಿಂದೇ ನಾವು ಕೇಂದ್ರದವರನ್ನು ಪದೇ ಪದೇ ಒತ್ತಾಯ ಮಾಡುತ್ತಾ ಇದ್ದೇವೆ. ಅಪ್ಪರ್ ಕೃಷ್ಣಾ

(ಶ್ರೀ ವೀರೇಂದ್ರ ಪಾಟೀಲ್)

ಸಲುವಾಗಿ ಇಷ್ಟೆಲ್ಲಾ ಒತ್ತಾಯ ಮಾಡುತ್ತಾ ಇದ್ದೀರಿ. ಚರ್ಚೆ ಮಾಡುತ್ತಾ ಇದ್ದೀರಿ, ಅದೇ ಕಾವೇರಿ ಬೇಸಿನ್‌ನಲ್ಲಿರತಕ್ಕ ಅನೇಕ ಪ್ರಾಜೆಕ್ಟುಗಳ ಸಲುವಾಗಿ ಏಕೆ ಒತ್ತಾಯ ಮಾಡಬಾರದು ಎಂದು ಕೆಲವರ ಮನಸ್ಸಿನಲ್ಲಿ ಸಂಶಯ ಬರಬಹುದು. ಅದು ಉತ್ತರ ಕರ್ನಾಟಕದಲ್ಲಿರುವುದರಿಂದ ಅದರ ಸಲುವಾಗಿ ಪ್ರಯತ್ನ ಮಾಡುತ್ತಾ ಇದ್ದಾರೆ, ಕೇಂದ್ರದಲ್ಲಿ ಪ್ರಭಾವ ಬೀರುತ್ತಾ ಇದ್ದಾರೆ, ದಕ್ಷಿಣ ಕರ್ನಾಟಕದ ಪ್ರಾಜೆಕ್ಟುಗಳಿಗೆ ಗಮನಕೊಡುತ್ತಾ ಇಲ್ಲ ಎಂದು ಸಂಶಯಬರಬಹುದು ಅದಕ್ಕೆ ಸ್ಪಷ್ಟವಾದಂತಹ ನಮ್ಮ ನೀತಿಯನ್ನು ತಮ್ಮ ಮುಂದೆ ಹೇಳಿದ್ದೇನೆ. ಇದು ಒಂದು ದೊಡ್ಡ ಪ್ರಾಜೆಕ್ಟು, ನಮ್ಮ ಶಕ್ತಿ ಮೀರಿ ಖರ್ಚಾಗುವಂತಹ ಪ್ರಾಜೆಕ್ಟು ಇದರಮೇಲೆ ಖರ್ಚು ಮಾಡುತ್ತಾ ಹೋದರೆ ಉಳಿಕೆ ಪ್ರಾಜೆಕ್ಟುಗಳಿಗೆ ಖರ್ಚು ಮಾಡಲು ಶಕ್ತಿ ಉಳಿಯುವುದಿಲ್ಲ ಆದ್ದರಿಂದ ಇದನ್ನು ಕೇಂದ್ರ ಸರ್ಕಾರದವರ ಜವಾಬ್ದಾರಿಗೆ ವಹಿಸಿದರೆ ಇದಕ್ಕೆ ಖರ್ಚಾಗತಕ್ಕ ಹಣದಿಂದ ಸಣ್ಣ ಪುಟ್ಟ 8-10, 12-20 ಲಕ್ಷ ರೂಪಾಯಿ ಖರ್ಚಾಗತಕ್ಕ ಎಲ್ಲಾ ಪ್ರಾಜೆಕ್ಟುಗಳನ್ನೂ ಮುಗಿಸುವುದಕ್ಕೆ ಹೆಚ್ಚು ಶ್ರಮಪಡಬೇಕಾಗಿಲ್ಲ. ಆ ರೀತಿಯಿಂದ ಇದರ ಸಲುವಾಗಿ ಹೆಚ್ಚು ಚಿಂತೆ ಮಾಡಬೇಕಾಗಿದೆ. ಇದನ್ನು ಕೇಂದ್ರ ಸರ್ಕಾರದವರು ಹೆಚ್ಚು ತೀವ್ರವಾಗಿ ಮಾಡಿ ಮುಗಿಸಲಿಕ್ಕೆ ಸಾಧ್ಯ. ಮತ್ತು ನಾವು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ಈ ವಿಚಾರದಿಂದ ಸರ್ಕಾರ ಸಾಕಾದಷ್ಟು ಪ್ರಮಾಣದಲ್ಲಿ ಪ್ರಯತ್ನ ಮಾಡುತ್ತಾ ಇದೆ ಎಂಬುದು ವ್ಯಕ್ತವಾಗುತ್ತದೆ. ಈ ಪ್ರಯತ್ನದಲ್ಲಿ ತಾವೆಲ್ಲರೂ ಇವತ್ತಿನ ದಿವಸ ಸಹಾಯಕರಾಗಿದ್ದೀರಿ ಒಂದು ಮತದಿಂದ, ಒಂದು ಕಂಠದಿಂದ ಸರ್ಕಾರದ ಹಿಂದೆ ಇದ್ದೇವೆ, ಈ ಠರಾವನ್ನು ಅಂಗೀಕಾರ ಮಾಡುತ್ತಾ ಇದ್ದೇವೆ, ಕೇಂದ್ರ ಸರ್ಕಾರದ ಮಟ್ಟದಲ್ಲಿ ಹೆಚ್ಚು ಪ್ರಯತ್ನ ಮಾಡಿ, ಪ್ರಭಾವ ಬೀರಿ ಇದನ್ನು ಆದಷ್ಟು ತೀವ್ರ ಮಂಜೂರು ಮಾಡಿಸಿ ತರಬೇಕೆಂದು ಹೇಳಿ ಇವತ್ತಿನ ದಿವಸ ತಾವೆಲ್ಲರೂ ಇದಕ್ಕೆ ಅನೇಕ ರೀತಿಯ ಸಲಹೆಗಳನ್ನು ಕೊಟ್ಟಿದ್ದೀರಿ, ಇದಕ್ಕಾಗಿ ತಮಗೆಲ್ಲರಿಗೂ ನಾನು ಬಹಳ ಅಭಾರಿಯಾಗಿದ್ದೇನೆ. ಇನ್ನು ನಾನು ಹೆಚ್ಚು ಏನನ್ನೂ ಹೇಳಬೇಕಾಗಿಲ್ಲ. ಬಹುಶಃ ನಾಳಿನ ಚರ್ಚೆಯಲ್ಲಿ ಕಾವೇರಿ ಬೇಸಿನ್‌ನಲ್ಲಿ ಬರತಕ್ಕ ನೀರನ್ನು ಉಪಯೋಗಿಸಿಕೊಳ್ಳಲು ಸರ್ಕಾರದವರು ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಮುಂದೆ ಯಾವ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬ ವಿಚಾರ ಇದೆ ಮತ್ತು ಯಾವ ಯಾವ ಪ್ರಾಜೆಕ್ಟುಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆ, ಇರಿಗೇಷನ್ ಪ್ರಾಜೆಕ್ಟ್ ಸಲುವಾಗಿ ಎಷ್ಟುಮಟ್ಟಿಗೆ ಆದ್ಯತೆ ಕೊಡಬೇಕೆನ್ನುವ ವಿಚಾರ ಇದೆ ಎನ್ನುವಂತಹ ಅನೇಕ ವಿಷಯಗಳನ್ನು ಹೇಳುವುದಕ್ಕೆ ಬೇರೆ ಅವಕಾಶವಿದೆ ಆದ್ದರಿಂದ ಈಗ ಅದರ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ. ಮಾನ್ಯ ಸದಸ್ಯರು ಒಮ್ಮತದಿಂದ ಇದನ್ನು ಅನುಮೋದಿಸಿದ್ದೀರಿ. ಆದರೆ ಒಂದು ಮಾತನ್ನು ಮಾತ್ರ ಹೇಳಬೇಕೆಂದು ಇದ್ದೇನೆ ಅದೇನೆಂದರೆ, ಪವರ್ ಸಲುವಾಗಿ ಸಾಕಾದಷ್ಟು ಅನುಕೂಲತೆ ಮಾಡಬೇಕೆಂದು ಇದ್ದೇವೆ. ಶರಾವತಿ ಪ್ರಾಜೆಕ್ಟಿನಿಂದ ಪವರ್‌ನ ಅನುಕೂಲತೆಯಾಗುತ್ತಾ ಇದೆ. ಆದರೆ ಇವತ್ತು ಇರಿಗೇಷನ್‌ನಲ್ಲಿ ಬಹಳ ಹಿಂದೆ ಬಿದ್ದಿದ್ದೇವೆ. ನೀರಾವರಿ ಸೌಕರ್ಯದಲ್ಲಿ ಎಲ್ಲರಿಗಿಂತ ಹಿಂದೆ ಬಿದ್ದಿರುವಂತಹ ಪರಿಸ್ಥಿತಿಯಿರುವುದರಿಂದ ನೀರಾವರಿ ಸೌಕರ್ಯ ಹೆಚ್ಚು ಮಾಡಬೇಕೆಂಬ ವಿಚಾರ ನಾವು ಮಾಡಬೇಕಾಗಿದೆ. ಹೆಚ್ಚಿನ ಮಟ್ಟದಲ್ಲಿ ನೀರಾವರಿ ಸೌಕರ್ಯವಾಗಬೇಕೆಂದಾಗ ಹೆಚ್ಚು ಸ್ಯಾಕ್ರಿಫೈಸ್ ಮಾಡುವುದಕ್ಕೆ ತಯಾರಾಗಬೇಕು. ನೂರಾರು ಕೋಟಿ ರೂಪಾಯಿ ಬೇಕಾಗುತ್ತದೆ. 3ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಂಡಂತಹ ಕೆಲಸಗಳನ್ನು ಮುಗಿಸಬೇಕಾದರೆ ಇನ್ನೂ ಸುಮಾರು 150 ಕೋಟಿ ರೂಪಾಯಿ ಬೇಕಾಗುತ್ತದೆ. ಏಕೆಂದರೆ, ಕಾವೇರಿ ಬೇಸಿನ್‌ನಲ್ಲಿ ಅದರ ನೀರನ್ನು 1974ರೊಳಗೆ ಉಪಯೋಗ ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರದವರು ನಿಗದಿ ಮಾಡಿರುವ 600 ಟಿ. ಎಂ. ಸಿ. ಉಪಯೋಗ ಮಾಡಿಕೊಳ್ಳಬೇಕು, ಇದನ್ನೆಲ್ಲಾ ಮಾಡಬೇಕಾದರೆ ನೂರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದನ್ನು ಎಲ್ಲಿಂದ ತರಬೇಕು ? ಇವತ್ತು ಒಂದು ಪ್ರಯಾರಿಟಿ ಹಾಕಿಕೊಂಡು ನಾವು ನೀವು ಎಲ್ಲರೂ ವಿಚಾರ ಮಾಡಿ ಮುಂದುವರಿಯಬೇಕಾಗಿದೆ. ಮಾನ್ಯ ಸದಸ್ಯರಿಗೆ ಗೊತ್ತಿಲ್ಲದಂತಹ ವಿಚಾರಗಳನ್ನು ನಾವೇನೂ ಮಾಡುತ್ತಾ ಇಲ್ಲ. ಅಂತಹ ದೋಷಾರೋಪಣೆಗಳೇನಾದರೂ ಇದ್ದರೆ ಅವನ್ನು ಸರಿಪಡಿಸಿಕೊಂಡು, ನಮ್ಮನಮ್ಮಲ್ಲೇ ಇತ್ಯರ್ಥಮಾಡಿಕೊಂಡು ನಾವೂ ನೀವು ಒಟ್ಟಾಗಿ ನಮ್ಮ ಶಕ್ತಿ ಎಷ್ಟು, ನಮ್ಮ ಹತ್ತಿರ ಇರುವಂತಹ ದುಡ್ಡು ಎಷ್ಟು...

Sri H. D. DEVE GOWDA (Holenarasipur).—You want to satisfy all the Members by implementing almost all schemes. You want to implement housing schemes and everything. How can you satisfy everybody ?

Sri VEERENDRA PATIL.—It is for all of us to sit together and find out ways and means. ಶ್ರೀಮಾನ್ ದೇವೇಗೌಡರು ಹೇಳಿದ್ದನ್ನು ಒಪ್ಪುತ್ತೇನೆ. ಎಲ್ಲಾ ಸ್ಕೀಂಗಳೂ ಆಗಬೇಕು, ಚಾನಲ್‌ಗಳು ಆಗಬೇಕು, ಸೋಷಿಯಲ್ ಸರ್ವೀಸ್ ಆಗಬೇಕು, ಕಾಲೇಜು ಆಗಬೇಕು, ಹೈಸ್ಕೂಲು ಆಗಬೇಕು, ಪ್ರೈಮರಿ ಸ್ಕೂಲು ಆಗಬೇಕು, ಹಾಸ್ಟೆಲ್ ಆಗಬೇಕು, ಹೌಸಿಂಗ್ ಆಗಬೇಕು, ರಸ್ತೆಯಾಗಬೇಕು, ಸೇತುವೆಯಾಗಬೇಕು ಇವುಗಳನ್ನೆಲ್ಲಾ ಮಾಡಬೇಕೆಂದರೆ ಆಗುವುದಿಲ್ಲ. ಇವತ್ತು ನಮ್ಮ ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯನ್ನು ನೋಡಿದರೆ ಯಾವುದು ಮೊದಲು ಮಾಡಬೇಕು, ಯಾವುದು ಅನಂತರ ಮಾಡಬೇಕು ಎಂದು ಹೇಳಿ ಪ್ರಯಾರಿಟಿ ನಿಗದಿ ಮಾಡಿ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಇವತ್ತು ಸ್ಪಷ್ಟವಾಗಿ ಹೇಳುತ್ತೇನೆ. ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿಕೊಂಡು ಅವು ಕಾರ್ಯಗತವಾಗುವಂತಹ ಪರಿಸ್ಥಿತಿ ಇಲ್ಲ. ದೇಶದಲ್ಲಿ ಬರುವಂತಹ ಆದಾಯ ಎಷ್ಟು ಯಾವ ರೀತಿ ಖರ್ಚು ಮಾಡುತ್ತಾ ಇದ್ದೇವೆ, ಮುಂದೆ ಯಾವ ರೀತಿ ಖರ್ಚು ಮಾಡಬೇಕೆನ್ನುವುದನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಬಹುಶಃ ಕಾವೇರಿ ಅಥವಾ ಕೃಷ್ಣಾ ನೀರನ್ನು ಉಪಯೋಗಮಾಡಿಕೊಳ್ಳುವುದಕ್ಕೆ ಸರಕಾರ ಕ್ರಮ ಕೈಗೊಂಡಿಲ್ಲವೆಂದು ಸರಕಾರವನ್ನು ಆ ತಪ್ಪಿಗೆ ಗುರಿಮಾಡಬಾರದು. ಈ ದಿವಸ ಪ್ರಾಜೆಕ್ಟುಗಳನ್ನು ಇನ್‌ವೆಸ್ಟಿಗೇಟ್ ಮಾಡಿದ್ದರೂ ಇರುವ ಒಂದು ದೋಷವೇನೆಂದರೆ ಹಣದ ಅಭಾವ. ಮೇಜರ್ ಇರಿಗೇಷನ್ ಪ್ರಾಜೆಕ್ಟುಗಳನ್ನು ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ಈಗ 3 ಸರ್ಕಲುಗಳನ್ನು ತೆರೆದಿದ್ದೇವೆ, ಅನೇಕ ಡಿವಿಜನ್ ಮತ್ತು ಸಬ್ ಡಿವಿಜನ್ನುಗಳನ್ನು ಮಾಡಿ ಜೊತೆಗೆ ಚೀಫ್ ಎಂಜಿನಿಯರನ್ನು ಇಟ್ಟಿದ್ದೇವೆ. ಗೋದಾವರಿ, ಕೃಷ್ಣ ಮತ್ತು ಕಾವೇರಿ ವ್ಯಾಲಿಗಳಲ್ಲಿ ಕೂಡ ನೀರನ್ನು ಉಪಯೋಗ ಮಾಡಲು ಯಾವ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬೇಕು ನೋಡಿ ಕೆಲಸ ನಡೆಯುತ್ತಿದೆ, ಇನ್ನೂ ಮಾಡುವುದೂ ಇದೆ. ಆದರೆ ಪ್ರಾಜೆಕ್ಟುಗಳನ್ನು ಮಾಡುವುದರಿಂದ ಲಾಭವಿಲ್ಲ. ಅವನ್ನು ತಯಾರಿಸಿ ಅಂದಾಜುಮಾಡಿದಮೇಲೆ ಹಣ ಬೇಕು. ಹಣವಿದ್ದರೂ ಶಕ್ತಿಯಿಲ್ಲ, ಸಿಬ್ಬಂದಿಇಲ್ಲ, ಆರ್ಗನೈಜೇಷನ್ ಇಲ್ಲ ಎಂಬ ಪರಿಸ್ಥಿತಿಯಿಲ್ಲ. ಆರ್ಗನೈಜೇಷನ್ ಇದೆ, ಶಕ್ತಿ ಇದೆ, ಅಪ್ಪರ್ ಕೃಷ್ಣ ಪ್ರಾಜೆಕ್ಟ್ ತೆಗೆದುಕೊಂಡರೆ ಬಹುಶಃ ಕೇಂದ್ರ ಸರಕಾರವನ್ನು ಅದನ್ನು ವಹಿಸಿಕೊಳ್ಳುವಂತೆ ಒತ್ತಾಯಮಾಡಿದರೆ ಹಣ ಒದಗಿಸುವ ಭರವಸೆ ಕೊಟ್ಟರೆ ಕೇವಲ 4 ವರ್ಷಗಳಲ್ಲಿ ಕೃಷ್ಣ ಮೇಲುದಂಡೆ ಯೋಜನೆಯ ಮೊದಲನೆಯ ಹಂತ ಮುಗಿಯಬಹುದು. ಆದರೆ ಹಣ ಬೇಕು. ನಿಧಾನವಾಗಿ ಇರುವ ನೀರನ್ನು ಉಪಯೋಗಮಾಡಬೇಕಾದರೂ ಹಣವಿಲ್ಲ. ಹಣವಿದ್ದರೂ ಖರ್ಚುಮಾಡುವುದಕ್ಕೆ ಶಕ್ತಿಯಿಲ್ಲವೆಂದರೆ ಆಗದೋಷ ಬರುತ್ತದೆ. ಈ ದಿವಸ ಕಾವೇರಿ ಮತ್ತು ಕೃಷ್ಣಾ ನದಿಗಳ ನೀರನ್ನು ಉಪಯೋಗಮಾಡಲು ಯಾವ ಯಾವ ಪ್ರಾಜೆಕ್ಟುಗಳನ್ನು ಕಾರ್ಯಗತ ಮಾಡಬೇಕೋ ಅದನ್ನು ಮಾಡಲು ನಾವು ಹಿಂದೆ ಬಿದ್ದಿಲ್ಲ, ಪ್ರಾಜೆಕ್ಟುಗಳನ್ನೆಲ್ಲಾ ತಯಾರು ಮಾಡಿದ್ದೇವೆ. ಕೆಲವು ದಿನಸಗಳಲ್ಲಿ ಪ್ರಾಜೆಕ್ಟುಗಳೆಲ್ಲಾ ಪೂರ್ಣವಾಗುವುವು. ಇವಕ್ಕೆ ಹಣ ಬೇಕು. ಈ ಹಣ ಯಾವ ರೀತಿಯಿಂದ ಒದಗಿಸಿಕೊಳ್ಳಬೇಕು, ಯಾವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು, ಇರಿಗೇಷನ್, ವಿದ್ಯಾಭ್ಯಾಸ, ಸೋಷಿಯಲ್ ಸರ್ವಿಸ್, ಕಮ್ಯೂನಿಕೇಷನ್, ಕಟ್ಟಡಗಳು ಮುಂತಾದುವುಗಳಲ್ಲಿ ಯಾವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು ಎಂದು ನಿರ್ಣಯ ಮಾಡಬೇಕು. ಇಲ್ಲಿ ಮೊದಲು ಕೃಷ್ಣಾ ವ್ಯಾಲಿ ನೀರನ್ನು ಉಪಯೋಗ ಮಾಡಬೇಕು, ರಸ್ತೆಯಾಗಬೇಕು, ಶಾಲಾ ಕಟ್ಟಡವಾಗಬೇಕು ಎಂದು ಹೇಳಿದರೆ ಲಾಭವಾಗುವುದಿಲ್ಲ, 1974ನೆಯ ಇಸವಿಯೊಳಗಾಗಿ ಕಾವೇರಿ ನದಿಯ ನೀರನ್ನು ಒಪ್ಪಂದದ ಪ್ರಕಾರ ಉಪಯೋಗಿಸಿಕೊಳ್ಳಬೇಕೆಂಬುದನ್ನು ಒಪ್ಪುತ್ತೇನೆ, ಅದು ಅವಶ್ಯವಿದೆ, ಅದೇ ರೀತಿ ಕೃಷ್ಣ ನದಿಯ ನೀರನ್ನು ಉಪಯೋಗಮಾಡುವುದೂ ಅವಶ್ಯವಿದೆ.

ಶ್ರೀ ಎಚ್. ಡಿ. ದೇವೇಗೌಡ.—ಬಡ್‌ಜೆಟ್ಟಿನಲ್ಲಿ ಕೆಲವು ಪ್ರದೇಶಗಳಲ್ಲಿ ಮಾತ್ರ ರಸ್ತೆ, ಸೇತುವೆ ಮಾಡಲು ಹಣ ಒದಗಿಸಿದಾಗ ನಮಗೂ ಕೂಡ ನಮ್ಮ ಭಾಗಗಳ ಕೆಲಸವನ್ನೂ ಮಾಡಿಸಿಕೊಳ್ಳಬೇಕೆಂಬ ಆಸೆ ಬರುತ್ತದೆ. ಆಗ ಒತ್ತಾಯ ಮಾಡುತ್ತೇವೆ. ಬಾಕಿ ವೆಚ್ಚ ತಡೆದು ಮೇಜರ್ ಇರಿಗೇಷನ್ ಕಾರ್ಯರೂಪಕ್ಕೆ ತರುತ್ತೇವೆಂದು ಹೇಳಿದರೆ ಅದನ್ನು ಸ್ವಾಗತಿಸುತ್ತೇವೆ.

ಶ್ರೀ ವೀರೇಂದ್ರ ಪಾಟೀಲ್.—ಬಜೆಟ್ಟಿನಲ್ಲಿರುವ ಪ್ರಾವಿಷನ್ ನಾವೂ ನೀವೂ ನಿರ್ಧಾರ ಮಾಡಬಹುದು, ಯಾವ ರೀತಿ ಬೇಕೋ ಆ ರೀತಿ ಉಪಯೋಗಮಾಡಿಕೊಳ್ಳಬಹುದು. ಮೇಜರ್ ಮತ್ತು ಮೈನರ್ ಇರಿಗೇಷನ್ನಿಗೆ 5 ಕೋಟಿ ರೂಪಾಯಿಗಳ ಪ್ರಾವಿಷನ್ ಇದೆ. ಆದರೆ ಇರಿಗೇಷನ್ ಬಾಬಿನ ಮೇಲೆ ಚರ್ಚೆಯಾದಾಗ 5 ಕೋಟಿ ರೂಪಾಯಿಗಳ ಸಾಲವಿದೆ ಎಂದು ಹೇಳಿದ್ದು ಜ್ಞಾಪಕವಿರಬಹುದು. ಇನ್ನೂ 3–4 ಕೋಟಿ ಹೆಚ್ಚಾಗಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದೆ. ಇತರ ಬಾಬುಗಳನ್ನು ಈಗ ಖೋತ ಮಾಡಬೇಕು. ಅದಕ್ಕೆ ತಯಾರಿರಬೇಕು. ಅದನ್ನು ಮೊದಲು ಮಾಡಿದರೆ ಸ್ವಲ್ಪ ಸಹಾಯವಾಗುತ್ತದೆಂಬುದನ್ನು ವಿಚಾರ ಮಾಡಬೇಕಾಗಿದೆ. ಇಂದು ಮೈಸೂರು ದೇಶದಲ್ಲಿ

(ಶ್ರೀ ವೀರೇಂದ್ರ ಪಾಟೀಲ್)

ಇರಿಗೇಷನ್ ಒಂದು ಗಹನವಾದ ಸಮಸ್ಯೆಯಾಗಿದೆ. ಇದು ಯಾವುದೇ ಪಕ್ಷದ ಸಮಸ್ಯೆ ಅಥವ ರೂಲಿಂಗ್ ಪಕ್ಷದ ಸಮಸ್ಯೇ ಎಂದು ವಿಚಾರ ಮಾಡಿದರೆ ಅದು ತಪ್ಪು. ಎಲ್ಲರೂ ಕುಳಿತು ಸಮಸ್ಯೆ ಬಿಡಿಸಬೇಕಾಗಿದೆ. ನೀರನ್ನು ಹೇಗೆ ಯಾವ ರೀತಿ ಉಪಯೋಗ ಮಾಡಬೇಕು ಎಂಬುದನ್ನು ವಿಚಾರ ಮಾಡಬೇಕಾಗಿದೆ. ಬಹುಶಃ ಕಾವೇರಿ ಒಪ್ಪಂದವಾಗಿದೆ, ಅದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು, 74ರೊಳಗೆ ಮುಗಿಸಬೇಕು. ಕಾವೇರಿ ನೀರನ್ನು ಉಪಯೋಗ ಮಾಡುವುದು ಎಷ್ಟು ಮುಖ್ಯವೋ ಕೃಷ್ಣಾ ನೀರನ್ನು ಉಪಯೋಗ ಮಾಡುವುದೂ ಅಷ್ಟೇ ಗಹನವಾದುದು. ಕೆಲವು ಪ್ರಾಜೆಕ್ಟುಗಳನ್ನು ಮಾಡಿ ನೀರನ್ನು ಡೈವರ್ಟ್ ಮಾಡಿ ಉಪಯೋಗಿಸಬೇಕೆಂಬ ಪ್ರಯತ್ನ ಮಹಾರಾಷ್ಟ್ರದಲ್ಲಿದೆ, ಅವರಿಗೆ ಫಲ ಸಿಕ್ಕಿಲ್ಲ, ಆದರೂ ಪ್ರಯತ್ನವಿದೆ. ಇದೇ ರೀತಿ ಆಂಧ್ರ ಪ್ರದೇಶದವರು ನಾಗಾರ್ಜುನ ಸಾಗರ ಪ್ರಾಜೆಕ್ಟನ್ನು ತೆಗೆದುಕೊಂಡಿದ್ದಾರೆ, ಅದರಿಂದ 40 ಲಕ್ಷ ಎಕರೆ ನೀರಾವರಿಗೆ ಬರುವುದು, ಬಹುಶಃ ಮೂರನೆಯ ಸ್ಟೇಜ್ ಪ್ರಾರಂಭಿಸಿದ ಮೇಲೆ ಡೈವರ್ಟ್ ಮಾಡಬೇಕೆಂದು ಹೇಳುತ್ತಾರೆ. ಕೃಷ್ಣ ವ್ಯಾಲಿಯ ನೀರನ್ನು ಉಪಯೋಗ ಮಾಡಿಕೊಳ್ಳಲು ದೊಡ್ಡ ಪ್ರಾಜೆಕ್ಟ್ ಪ್ರಾರಂಭಿಸಿದ್ದಾರೆ. ಅದರ ಸಲುವಾಗಿ ನಾವೂ ಉಪಯೋಗ ಮಾಡಿಕೊಳ್ಳಬೇಕು. ನಮ್ಮ ಭಾಗಕ್ಕೆ 1,250 ಟಿ.ಎಂ. ಸಿ ಎಫ್.ಟಿ. ನೀರು ದೊರೆಯಬೇಕು, ಅದಕ್ಕೆ ಯೋಜನೆ ಮಾಡಿ ಒಂದು ಪಟ್ಟಿ ಕೂಡ ಕೇಂದ್ರ ಸರಕಾರಕ್ಕೆ ಕಳಿಸಿದ್ದೇವೆ. ಗಾಂಜಿ ವೀರಪ್ಪನವರು ಹೇಳಿದ ಹಾಗೆ 1976ರೊಳಗೆ ಉಪಯೋಗ ಮಾಡಿಕೊಳ್ಳದಿದ್ದರೆ ಹೇಗೆ ಕೇಳುವುದು ? ನಾವು ಆ ಅವಧಿಯಲ್ಲಿ ಉಪಯೋಗಮಾಡಿಕೊಳ್ಳಬಹುದು, ನಮ್ಮ ಕೈಲಿ ಶಕ್ತಿಯಿಲ್ಲದೆ ನಾವು ಬೇರೆಯವರಿಗೆ ಅವಕಾಶ ಕೊಡುತ್ತಿಲ್ಲ. ಆದರೆ ನಿಮ್ಮ ಕೈಲಿ ಶಕ್ತಿಯಿಲ್ಲ, ಬೇರೆಯವರಿಗೂ ಅವಕಾಶ ಕೊಡುವುದಿಲ್ಲ ಎಂದು ಹಣದ ಕೊರತೆಯಿಂದ ನಿಧಾನವಾದಾಗ, ನಾವು ಮಾಡುವುದನ್ನು ಒಪ್ಪುವುದಿಲ್ಲವೆಂದು ಹಟ ಹಿಡಿದರೆ ಏನು ಮಾಡುವುದು ? ಎರಡು ದೇಶಗಳಲ್ಲೂ ನೀರು ಉಪಯೋಗ ಮಾಡುವುದು ಅವಶ್ಯ ಇದೆ. ಇದು ಜಟಿಲ ಸಮಸ್ಯೆಯಾಗಿದೆ. ಎಲ್ಲರೂ ಶ್ರಮಪಡಬೇಕಾಗಿದೆ. ನಾಳೆ ಮತ್ತೆ ವಿಚಾರ ಮಾಡುವುದಕ್ಕೆ ಅವಕಾಶ ಸಿಕ್ಕುತ್ತದೆಂದು ಕಾಣುತ್ತದೆ. ಆಗ ಸದಸ್ಯರು ಬಹಳ ಉಪಯುಕ್ತವಾದ ಸಲಹೆ ಕೊಡುತ್ತೀರಿ, ಅದನ್ನು ನೋಡಿ ಒಂದು ನಿರ್ಣಯ ಮಾಡುವುದಕ್ಕೆ ಸಾಧ್ಯವಾಗಬಹುದು ಎಂದು ಭಾವಿಸಿ ಈ ನಿರ್ಣಯಕ್ಕೆ ಸರ್ವಾನುಮತದ ಒಪ್ಪಿಗೆ ಇರುವುದರಿಂದ ಇದು ಅಂಗೀಕಾರವಾಗುತ್ತದೆಂದು ನಂಬಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್. ಅವಲರೆಡ್ಡಿ (ಶಿಡ್ಲಘಟ್ಟ).—ಒಂದು ವೇಳೆ ಕೇಂದ್ರ ಸರಕಾರ ಈ ಯೋಜನೆಯನ್ನು ತೆಗೆದುಕೊಳ್ಳದೆ ಪ್ರತ್ಯೇಕವಾಗಿ ಇದಕ್ಕೆ ಹಣ ಕೊಡದಿದ್ದರೆ ವರ್ಲ್ಡ್ ಬ್ಯಾಂಕಿನಿಂದ ಕೇಂದ್ರ ಸರಕಾರದ ಮೂಲಕ ವ್ಯವಹಾರ ನಡೆಸಿ ಸಹಾಯ ಪಡೆಯಬಹುದು.

ಅಧ್ಯಕ್ಷರು : ತಾವು ಸೂಚನೆ ಮಾಡಿರುವುದನ್ನು ಸರಕಾರ ಆಲೋಚನೆ ಮಾಡಬಹುದು. ಈಗ ಅದಕ್ಕೆ ಜವಾಬು ಹೇಳಲು ಸಮಯವಿಲ್ಲ.

Sri G. V. GOWDA.—There are two alternatives—either the Government of India should take over this project and treat it as a centrallay sponsored scheme, or if they are not agreeable, they should give some finance assistance treating it as outside the Plan.

Sri VEERENDRA PATIL.—The first alternative is that either the Government of India should take over this project treating it as a Centrally sponsored scheme and finance it or the second alternative is to treat this project outside the State plan ceiling and give special assistance. So far as the first alternative is concerned, we are doubtful because they may not agree to take up this as a centrally sponsored project. The second alternative is to give special assistance. Either it may be in full or part.

ಶ್ರೀ ಪಿ. ಬಿ. ಬೊಮ್ಮಣ್ಣ (ಅರಸೀಕೆರೆ).—ಮಾನ್ಯ ಸದಸ್ಯರಾದ ಅಣ್ಣಾರಾಯರು ಹೇಳಿದರು ಈ ಯೋಜನೆಗೆ ಹಣವೂ ಇಲ್ಲ, ಆದಕ್ಕೆ ಸಾಕಾದಷ್ಟು ನೀರೂ ಸಿಕ್ಕುವುದಿಲ್ಲ, ನಮಗೆ 110 ಟಿ.ಎಂ.ಸಿ. ಎಫ್.ಟಿ. ನೀರು ಮಾತ್ರ ಬರುತ್ತದೆ ಎಂದು ಹೇಳಿದರು. ಎಷ್ಟು ನೀರು ಬರುತ್ತದೆ ಎನ್ನುವ ಭರವಸೆ ಸರ್ಕಾರಕ್ಕೆ ಇದೆ ಸ್ವಾಮಿ !

ಶ್ರೀ ವೀರೇಂದ್ರ ಪಾಟೀಲ್.—ಕೃಷ್ಣ ನೀರಿನ ಹಂಚಿಕೆ ಎಲ್ಲ ಆಗಿದೆ, ಇನ್ನು ಹಂಚುವುದಕ್ಕೆ ನೀರು ಏನೂ ಇಲ್ಲ ಎನ್ನುವ ಮಾತನ್ನು ಕೆಲವರು ಹೇಳಿದ್ದಾರೆ. ನಮಗೆ ಇವತ್ತು ಕೃಷ್ಣ ಮೇಲ್ದಂಡೆ ಯೋಜನೆಗೆ ಎಷ್ಟು ನೀರು ಬೇಕೋ ಅಷ್ಟೂ ಸಿಕ್ಕುತ್ತದೆ ಎನ್ನುವ ಭರವಸೆಯನ್ನು ಕೇಂದ್ರದವರು ಈಗಾಗಲೇ ಕೊಟ್ಟಿದ್ದಾರೆ. ಮೊದಲನೆ ಹಂತದ ಕೆಲಸ ಪ್ರಾರಂಭವಾಗಿದೆ. ಮೊದಲನೆಯ ಹಂತಕ್ಕೆ 116 ಟಿ.ಎಂ.ಸಿ.ಎಫ್.ಟಿ. ನೀರು ಬೇಕು. ಅಷ್ಟು ನೀರು ಇರಲಾರದೆ ಹೋಗಿದ್ದರೆ, ಪಾರ್ಲಿಮೆಂಟಿನಲ್ಲಿ ಹಿಂದೆ ಒಂದು ಹೇಳಿಕೆಯನ್ನು ಕೊಟ್ಟು ನಮ್ಮ ರಾಜ್ಯಕ್ಕೆ ಕೃಷ್ಣಾ ನೀರಿನಲ್ಲಿ 600 ಟಿ.ಎಂ.ಸಿ.ಎಫ್.ಟಿ. ನೀರನ್ನು ನಮಗೆ ಅಲಾಟ್ ಮಾಡುತ್ತಿರಲಿಲ್ಲ.

MR. SPEAKER.—I will put the Resolution to the vote of the House. The question is :

"That this House urges upon the Government to persuade the Government of India to take up the Upper Krishna Project estimated to cost Rs. 120 crores which will irrigate nearly 14 lakhs of acres of land in the dry regions of the State as a centrally Aided Project outside the State Plan and complete it with the utmost expedition,"

"thereby raising the present low percentage of irrigated area in the State which is adversely affecting the economy of the people,"

"as a big step towards adequately harnessing the un-utilised irrigation potential of the State which is blessed with a bounteous watershed."

"and to enable the people to increase farm production and overcome the present shortage of food."

(The Resolution was adopted)

Tomorrow I would like to have a better co-ordination amongst members. We may meet at 10 a.m. If members like to meet me, they may kindly meet me at 8 O'clock for the purpose of co-ordinating the work tomorrow. We can meet tomorrow at 10 a.m. and sit up to 1 p.m. Or we may rise at half past twelve and meet again at 2-30 p.m. Now the House will rise and meet tomorrow at 10 a.m.

The House adjourned at Fifty-five Minutes past Five of the Clock to meet again at Ten of the Clock on Friday, the 8th April 1966.

WD 6824 -GPB—500 -8-7-1966